ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಆಲ್‌ರೌಂಡರ್ ಅಜ್ಮತ್ ವುಲ್ಲಾ ಒಮರ್‌ಝೈ (15ಕ್ಕೆ4) ಮತ್ತು ಅಜೇಯ (40ರನ್) ಅವರ ಅಮೋಘ ಆಟದ ನೆರವಿನಿಂದ ಅಫ್ಘಾನಿಸ್ತಾನ ತಂಡವು ಯುಎಇ ವಿರುದ್ಧ ಟಿ-20 ವಿಶ್ವಕಪ್ ನಲ್ಲಿ ಮೊದಲ ಜಯ ದಾಖಲಿಸಿತು.

17 ಫೆಬ್ರವರಿ 2026 ಮಂಗಳವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 333 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629



ಸಣ್ಣ ದೇಹ, ಅಗಾಧ ವೇಗ » 2



ಒಳ ಮೀಸಲಾತಿ-ಬಲಗೈ ಸಮುದಾಯಕ್ಕೆ ಅನ್ಯಾಯ : ಪ್ರತಿಭಟನೆ » 3



ಆತ್ಮ ನಿರ್ಭರವೋ-ಅಮೇರಿಕಾ ನಿರ್ಭರವೋ: ಕೇಂದ್ರದ ವಿರುದ್ಧ ಕಾಂಗ್ರೆಸ್ ವಾಗ್ದಾಳಿ » 4

# ಬಜೆಟ್ ಮಂಡನೆಗೆ ಮುಹೂರ್ತ ಫಿಕ್ಸ್

- ಕುರ್ಚಿ ಕಾಳಗದ ನಡುವೇ ಆಯವ್ಯಯ ಮಂಡಣೆ
- ಮಾ.6 ರಿಂದ 27ರವರೆಗೆ ಅಧಿವೇಶನ

• ಪ್ರಜೋದಯ ವರದಿ

ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆಯ ಚರ್ಚೆ ಜೋರಾಗಿರುವ ನಡುವೆಯೇ 2026-27ನೇ ಸಾಲಿನ ರಾಜ್ಯ ಬಜೆಟ್ ಮಂಡನೆಗೆ ದಿನಾಂಕ ನಿಗದಿಯಾಗಿದೆ. ಹಣಕಾಸು ಖಾತೆ ಹೊಂದಿರುವ ಸಿದ್ದರಾಮಯ್ಯ ಅವರು ಮಾ.6 ರಂದು ತಮ್ಮ ದಾಖಲೆಯ 17ನೇ ಬಜೆಟ್ ಮಂಡಿಸಲು ಸಜ್ಜಾಗಿದ್ದಾರೆ.

ಮಾರ್ಚ್ 6 ರಂದು ಬೆಳಿಗ್ಗೆ 10.15ಕ್ಕೆ ಬಜೆಟ್ ಅಧಿವೇಶನ ಆರಂಭವಾಗಲಿದ್ದು, ಮಾರ್ಚ್ 27ಕ್ಕೆ ಅಂತ್ಯವಾಗಲಿದೆ. ಒಟ್ಟು 14 ದಿನ ಬಜೆಟ್ ಅಧಿವೇಶನ ನಡೆಯಲಿದೆ ಎಂದು ವಿಧಾನ ಸಭೆ ಕಾರ್ಯದರ್ಶಿ ಸೋಮವಾರ ಅಧಿಕೃತ ಪ್ರಕಟಣೆ ಹೊರಡಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗಾಗಲೇ 2026-27ನೇ ಸಾಲಿನ ಬಜೆಟ್ ಮಂಡಿಸಲು ಸಕಲ ಸಿದ್ಧತೆ ನಡೆಸು ತ್ತಿದ್ದು, ಸರಣಿ ಬಜೆಟ್ ಪೂರ್ವಭಾವಿ ಸಭೆ ನಡೆಸುತ್ತಿದ್ದಾರೆ. ಈ ಬಾರಿ 17ನೇ ಬಜೆಟ್ ಮಂಡಿಸುವ ಮೂಲಕ ರಾಜ್ಯದಲ್ಲಿಯೇ ಅತಿಹೆಚ್ಚು ಬಜೆಟ್ ಮಂಡಿಸಿದ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಸಿದ್ದರಾಮಯ್ಯ ಪಾತ್ರರಾಗಲಿದ್ದಾರೆ.

**ಇಂದು ವಿದೇಶಕ್ಕೆ ಶಾಸಕರು**

ಕಾಂಗ್ರೆಸ್‌ನಲ್ಲಿ ಅಧಿಕಾರ ಹಂಚಿಕೆ ಸಂಘರ್ಷ ತೀವ್ರವಾಗಿರುವ ನಡುವೆಯೇ, ಸಮಾನ ಮನಸ್ಕ ಕಾಂಗ್ರೆಸ್ ಶಾಸಕರು ವಿದೇಶ ಪ್ರವಾಸಕ್ಕೆ ತೆರಳಲು ಸಜ್ಜಾಗಿದ್ದಾರೆ. ಮಂಗಳವಾರ ರಾತ್ರಿ 8 ಗಂಟೆಗೆ ಬೆಂಗಳೂರಿನಿಂದ ಆಸ್ಟ್ರೇಲಿಯಾಕ್ಕೆ ಪ್ರಯಾಣಿಸಲು ತೀರ್ಮಾನಿಸಿರುವುದು ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ. ಈ ಪ್ರವಾಸಕ್ಕೆ ಹೋಗುವವರಲ್ಲಿ ವಿಶೇಷವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಣದಲ್ಲಿ ಗುರುತಿಸಿಕೊಂಡಿರುವ ಶಾಸಕರೇ ಹೆಚ್ಚು ಸಂಖ್ಯೆಯಲ್ಲಿ ಇದ್ದಾರೆ ಎಂಬುದು ತಿಳಿದುಬಂದಿದೆ.



ವೀಸಾ ಸಿಗದ ಕಾರಣ ಕೆಲ ಶಾಸಕರು ಪ್ರವಾಸವನ್ನು ರದ್ದು ಮಾಡಿಕೊಂಡಿದ್ದಾರೆ. ಇನ್ನೂ ಕೆಲವರು ವಿವಿಧ ಕಾರಣಗಳನ್ನು ನೀಡಿ ಈ ಪ್ರವಾಸದಿಂದ ದೂರ ಉಳಿದಿದ್ದಾರೆ. ಹೈಕಮಾಂಡ್ ಕೆಂಗಣ್ಣಿಗೆ ಗುರಿಯಾಗಬಹುದೆಂಬ ಆತಂಕವೂ ಕೆಲವರ ನಿರ್ಧಾರಕ್ಕೆ ಕಾರಣವಾಗಿದೆ ಎಂಬ ಮಾತುಗಳು ಕಾಂಗ್ರೆಸ್ ಆಂತರಿಕ ವಲಯದಲ್ಲಿ ಕೇಳಿ ಬರುತ್ತಿವೆ.

ಕೆಲ ಶಾಸಕರು ಕುಟುಂಬ ಸಹಿತ ಟಿಕೆಟ್ ಬುಕ್ ಮಾಡಿರುವವರು ಪ್ರವಾಸ ರದ್ದುಪಡಿಸಲು ಹಿಂದೇಟು ಹಾಕುತ್ತಿದ್ದಾರೆ. ಮತ್ತೊಂದೆಡೆ, ಒಬ್ಬರೇ ಟಿಕೆಟ್ ಬುಕ್ ಮಾಡಿದ್ದ ಕೆಲವರು ತಮ್ಮ ಪ್ರಯಾಣವನ್ನು ಈಗಾಗಲೇ ರದ್ದುಪಡಿಸಿದ್ದಾರೆ. ಈ ಎಲ್ಲಾ ಗೊಂದಲಗಳ ನಡುವೆಯೇ ಮಂಗಳವಾರ ರಾತ್ರಿ 8 ಗಂಟೆಗೆ ಬೆಂಗಳೂರಿನಿಂದ ಆಸ್ಟ್ರೇಲಿಯಾ ಕಡೆ ಶಾಸಕರ ಪ್ರಯಾಣ ನಿಗದಿಯಾಗಿದೆ. ಮಾರ್ಚ್ 1ರಂದು ಅವರು ವಾಪಸ್ಸಾಗಲಿದ್ದಾರೆಂದು ಮೂಲಗಳು ತಿಳಿಸಿವೆ.

**ಕಾಂಗ್ರೆಸ್ ನಾಯಕತ್ವ ಅಸಹಾಯಕವಲ್ಲ**

ನಾಯಕತ್ವ ಜಟಾಪಟಿಗೆ ಸಂಬಂಧಿಸಿದಂತೆ ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಪ್ರತಿಕ್ರಿಯಿಸಿ, ಕಾಂಗ್ರೆಸ್ ನಾಯಕತ್ವ ಅಸಹಾಯಕವಲ್ಲ, ಸಮಯ ಸಂದರ್ಭ ಬಂದಾಗ ಸೂಕ್ತ ತೀರ್ಮಾನ ಕೈಗೊಳ್ಳುತ್ತದೆ. ನಾಯಕತ್ವ ಗೊಂದಲ ಇಲ್ಲ, ಸೂಕ್ತವಾದ ಸಮಯದಲ್ಲಿ ಸೂಕ್ತ ನಿರ್ಧಾರಗಳನ್ನು ಹೈಕಮಾಂಡ್ ಕೈಗೊಳ್ಳಲಿದೆ ಎಂದು ಹೇಳಿದರು.

ನಾಯಕತ್ವ ಬದಲಾವಣೆ ವಿಚಾರವನ್ನು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆಯವರು ತೀರ್ಮಾನಿಸಬೇಕು. ಯಾವುದೇ ವಾಹನ ಎರಡು ಟ್ರ್ಯಾಕ್‌ಳಲ್ಲಿ ಹೋಗೋಕೆ ಆಗುವುದಿಲ್ಲ. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಎರಡು ಇಂಜಿನ್‌ಗಳೇ ಆಗಿವೆ. ಸರ್ಕಾರದಲ್ಲಿ ಸಿದ್ದರಾಮಯ್ಯ ಮುಂದಿರ್ತಾರೆ, ಪಕ್ಷದ ಅಧ್ಯಕ್ಷರು ಹಿಂದಿರುತ್ತಾರೆ. ಪಕ್ಷ ಬಂದಾಗ ಡಿ.ಕೆ.ಶಿವಕುಮಾರ್ ಮುಂದಿರುತ್ತಾರೆ ಎಂದರು.

ನಾಯಕತ್ವ ಗೊಂದಲವನ್ನು ಹೈಕಮಾಂಡ್ ಸರಿಪಡಿಸುತ್ತದೆ. ಸೋನಿಯಾ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಹಾಗು ರಾಹುಲ್ ಗಾಂಧಿಗೆ ಎಲ್ಲಾ ವಿಚಾರಗಳು ಗೊತ್ತಿದೆ. ಹಾಗಾಗಿ ಹೈಕಮಾಂಡ್ ನಾಯಕರು ಅಸಹಾಯಕರಲ್ಲ. ಅಸಹಾಯಕತೆ ಎಂಬುವುದು ಹೈಕಮಾಂಡ್‌ಗೆ ಇಲ್ಲ. ಅಧ್ಯಕ್ಷರು ಈಗ ಕಿವಿಮಾತು ಹೇಳಿದ್ದಾರೆ. ಸಮಯ ಬಂದಾಗ ಅವರು ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂದರು.

## ಜಿಲ್ಲಾ ನ್ಯಾಯಾಲಯಕ್ಕೆ ಮತ್ತೊಮ್ಮೆ ಹುಸಿ ಬಾಂಬ್ ಬೆದರಿಕೆ

**ಪೊಲೀಸರು, ಶ್ವಾನದಳ, ಬಾಂಬ್ ನಿಷ್ಕ್ರಿಯ ದಳದಿಂದ ಸುದೀರ್ಘ ತಪಾಸಣೆ**

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ನ್ಯಾಯಾಲಯಕ್ಕೆ ಸೋಮವಾರ ಬೆಳಿಗ್ಗೆ ನ್ಯಾಯಾಲಯದ ಅಧಿಕೃತ ಇ-ಮೇಲ್ ವಿಳಾಸಕ್ಕೆ ಮತ್ತೊಮ್ಮೆ ಬಾಂಬ್ ಬೆದರಿಕೆ ಇ- ಮೇಲ್ ಸಂದೇಶದಿಂದ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಬೆಂದರಿಕೆ ಸಂದೇಶದ ಮಾಹಿತಿ ದೊರಕುತ್ತಿದ್ದಂತೆ ನಗರ ಠಾಣೆ ಪೊಲೀ ಸರು ನ್ಯಾಯಾಲಯ ಆವರಣಕ್ಕೆ ಧಾವಿಸಿ ಪ್ರಾಥಮಿಕ ಪರಿಶೀಲನೆ ನಡೆಸಿದರು. ನಂತರ ಬಾಂಬ್ ನಿಷ್ಕ್ರಿಯ ದಳ ಮತ್ತು ಶ್ವಾನದಳವನ್ನು ಸ್ಥಳಕ್ಕೆ ಕರೆ ತಂದು, ಸಂಪೂರ್ಣ ಆವರಣವನ್ನು ತಪಾಸಣೆಗೆ ಒಳಪಡಿಸಲಾಯಿತು. ನ್ಯಾಯಾಲಯದ ಪ್ರವೇಶ ದ್ವಾರಗಳು, ಪಾರ್ಕಿಂಗ್ ಪ್ರದೇಶ, ನ್ಯಾಯಾಧೀಶರ ಕಚೇರಿ ಗಳು, ನ್ಯಾಯಾಲಯದ ಒಳಭಾಗ, ದಾಖಲೆ ಕೊಠಡಿಗಳು ಸೇರಿ ಪ್ರತಿಯೊಂದು ಭಾಗದಲ್ಲೂ ಸೂಕ್ಷ್ಮ ಪರಿಶೀಲನೆ ನಡೆಯಿತು.

ಭದ್ರತಾ ದೃಷ್ಟಿಯಿಂದ ನ್ಯಾಯಾ ಲಯ ಆವರಣದಲ್ಲಿ ಹೆಚ್ಚುವರಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ನ್ಯಾಯಾಲಯಕ್ಕೆ ಆಗಮಿಸುವ ಸಾರ್ವಜನಿಕರು ಹಾಗು ವಕೀಲರನ್ನೂ ತಪಾಸಣೆಯ ಬಳಿಕವೇ ಒಳಗೆ ಬಿಡಲಾಯಿತು. ತಪಾಸಣೆ ವೇಳೆ ಯಾವುದೇ ಅನುಮಾನಾಸ್ಪದ ವಸ್ತು ಕಂಡು ಬಾರದ ಹಿನ್ನಲೆ ಇದೊಂದು ಹುಸಿ ಸಂದೇಶ ಎಂದು ಖಚಿತವಾಗುತ್ತಿದ್ದಂತೆ ಆತಂಕ ದೂರವಾಯಿತು.

ಬೆದರಿಕೆ ಇ-ಮೇಲ್‌ನ ಮೂಲ ಪತ್ತೆ ಹಚ್ಚಲು ಸೈಬರ್ ವಿಭಾಗದ ಸಹಾ ಯದಿಂದ ತನಿಖೆ ಆರಂಭಿಸಲಾಗಿದೆ.



ಇ-ಮೇಲ್ ಯಾವ ಸ್ಥಳದಿಂದ ಕಳುಹಿಸಲಾಗಿದೆ, ಅದರ ಹಿಂದೆ ಯಾರು ಇದ್ದಾರೆಂಬುದರ ಕುರಿತು ಪೊಲೀಸರು ತೀವ್ರ ಪರಿಶೀಲನೆ ನಡೆಸುತ್ತಿದ್ದಾರೆ. ಈ ನಡುವೆ, ನ್ಯಾಯಾಲಯದ ನಿಯಮಿತ ಕಲಾಪಗಳು ಎಂದಿನಂತೆ ಮುಂದುವರಿದಿರು ವುದು ಗಮನಾರ್ಹ. ಭದ್ರತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಾ ವಿಚಾ ರಣೆಗಳು ನಡೆಯುತ್ತಿವೆ. ಸಾರ್ವಜನಿ ಕರಲ್ಲಿ ಆತಂಕ ಸೃಷ್ಟಿಯಾಗದಂತೆ ಪೊಲೀಸರು ಮನವಿ ಮಾಡಿದ್ದಾರೆ.

ಜಿಲ್ಲಾ ನ್ಯಾಯಾಲಯಕ್ಕೆ ಇದು ಎರಡನೇ ಬಾರಿ ಬಾಂಬ್ ಬೆದರಿಕೆ ಇ-ಮೇಲ್ ಸಂದೇಶ ಬಂದಿದೆ. ಹಿಂದಿನ ಪ್ರಕರಣದಲ್ಲಿಯೂ ಯಾವುದೇ ಸ್ಫೋಟಕ ವಸ್ತು ಪತ್ತೆಯಾಗಿರಲಿಲ್ಲ, ಆದರೂ ಈ ರೀತಿಯ ಮರುಕಳಿಸುವ ಬೆದರಿಕೆ ಪ್ರಕರಣಗಳು ಕಾನೂನು ಸುವ್ಯವಸ್ಥೆಗೆ ಸವಾಲಾಗಿವೆ.

## ಪ್ರೀತಮ್‌ಗೌಡ ಹೇಳಿಕೆ ಪಕ್ಷದ ಪರ, ಹಿತಕ್ಕಾಗಿ

**ನಮ್ಮ ನಾಯಕರ ಬಗ್ಗೆ ಅನಾವಶ್ಯಕವಾಗಿ ಮಾತನಾಡದಿರಿ: ಶಾಸಕ ಸಿಮೆಂಟ್ ಮಂಜು**




• ಪ್ರಜೋದಯ ವರದಿ

**ಹಾಸನ:** ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಮ್ ಜೆ.ಗೌಡ ಅವರು ಪಕ್ಷದ ಪರವಾಗಿ, ಪಕ್ಷದ ಹಿತಕ್ಕಾಗಿ ತಮ್ಮ ಹೇಳಿಕೆಗಳನ್ನು ನೀಡುತ್ತಿದ್ದಾರೆ. ನಮ್ಮ ನಾಯಕರ ಬಗ್ಗೆ ಯಾರೂ ಅನಾವಶ್ಯಕವಾಗಿ ಮಾತನಾಡಬಾರದೆಂದು ಶಾಸಕ ಸಿಮೆಂಟ್ ಮಂಜು ಅವರು ಸಮರ್ಥಿಸಿಕೊಂಡರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2028ಕ್ಕೆ ನಮ್ಮ ಪಕ್ಷವೇ ಅಧಿಕಾರಕ್ಕೆ ಬರಬೇಕು, ನಮ್ಮವರೇ ಮುಖ್ಯಮಂತ್ರಿ ಆಗಬೇಕೆಂಬುದು ಕಟ್ಟಕಡೆಯ ಕಾರ್ಯಕರ್ತರ ಆಸೆ, ಮನಸ್ಸಿನ ಭಾವನೆಯನ್ನು ಅವರು ಹೇಳಿದ್ದಾರೆ. ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಅವರ ಹೇಳಿಕೆಯನ್ನು ಗಮನಿಸಿದ್ದೇನೆ. 37 ವರ್ಷಕ್ಕೇ ಶಾಸಕರಾಗಿ ನಗರ ಹಾಗು ಜಿಲ್ಲೆ ಮೆಚ್ಚುವ, ನೆನಪಲ್ಲಿ ಉಳಿಯುವ ಕೆಲಸ ಮಾಡಿದ್ದಾರೆಂದು ಹೇಳಿದರು.

> **ಆರ್‌ಎಸ್‌ಎಸ್ ಸಂಘಟಕರು ಮದುವೆ ಆಗಿಲ್ಲವೆಂಬ ಹೇಳಿಕೆಗೆ ಮೊದಲು ಅವರ ನಾಯಕ ರಾಹುಲ್ ಗಾಂಧಿ ಅವರ ಮದುವೆ ಮಾಡಿಸಲಿ. ರಾಜಕಾರಣ ಮಾಡಲೆಂದೇ ಬಿಜೆಪಿ ಇದೆ, ಪಕ್ಷಕ್ಕೆ ಆರ್‌ಎಸ್‌ಎಸ್ ಮಾರ್ಗದರ್ಶನ ಮಾಡುತ್ತಿದೆ.**
> **-ಸಿಮೆಂಟ್ ಮಂಜು, ಶಾಸಕ**

ರಾಜ್ಯದ ಎಲ್ಲಾ ಕ್ಷೇತ್ರದಲ್ಲಿ ನಮ್ಮ ಪಕ್ಷ ಸ್ಪರ್ಧೆ ಮಾಡಬೇಕೆಂಬುದು ನಮ್ಮೆಲ್ಲರ ಬಯಕೆ. ಆದರೆ, ಮೈತ್ರಿ ವಿಚಾರದಲ್ಲಿ ನಮ್ಮ ನಾಯಕರು

» ನಾಲ್ಕನೇ ಪುಟದಲ್ಲಿ

# ಆಸ್ಪತ್ರೆ, ಕಚೇರಿಗಳಿಗೆ ಸಚಿವ ಕೃಷ್ಣಬೈರೇಗೌಡ ದಿಢೀರ್ ಭೇಟಿ

**ಬೆಂಗಾಲು ವಾಹನ ಬಿಟ್ಟು ಚನ್ನರಾಯಪಟ್ಟಣ, ಹೊಳೆನರಸೀಪುರದಲ್ಲಿ ಪರಿಶೀಲನೆ**

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಸೋಮವಾರ ಮುನ್ಸೂಚನೆ ನೀಡದೆ, ತಮ್ಮ ಬೆಂಗಾಲು ವಾಹನವನ್ನೂ ಬಿಟ್ಟು ದಿಢೀರ್ ಚನ್ನರಾಯ ಪಟ್ಟಣ ಹಾಗು ಹೊಳೆನರಸೀಪುರ ತಾಲ್ಲೂಕು ಪಂಚಾಯಿತಿ, ಆಸ್ಪತ್ರೆ, ಶಾಲೆ, ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಜನರ ಸಮಸ್ಯೆ ಆಲಿಸಿದರು.

ಸೋಮವಾರ ಬೆಳಿಗ್ಗೆ 11 ಗಂಟೆ ಸುಮಾರಿಗೆ ಚನ್ನರಾಯಪಟ್ಟಣ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿದ ಸಚಿವರು, ಒಳ ರೋಗಿಗಳು, ಹೊರ ರೋಗಿಗಳನ್ನು ಚಿಕಿತ್ಸೆ ಗುಣ ಮಟ್ಟದ ಕುರಿತಾಗಿ ವಿಚಾರಿಸಿದರು. ಆಸ್ಪತ್ರೆಯನ್ನೆಲ್ಲಾ ಸುತ್ತಾಡಿ, ಪುರುಷ, ಮಹಿಳೆಯರ ವಾರ್ಡ್, ಡಯಾಲಿಸಿಸ್ ಕೇಂದ್ರ, ಪ್ರಯೋಗಾಲಯ, ಎಕ್ಸರೇ ರೂಂ, ಸ್ಕ್ಯಾನಿಂಗ್, ಔಷಧಿಗಳ ಉಗ್ರಾಣ, ಔಷಧಾಲಯದಲ್ಲಿದ್ದ ಔಷಧಿಗಳ ಪರಿಶೀಲನೆ ನಡೆಸಿದರು.

ಔಷಧಿಗಳ ಅವಧಿ ಮೀರುವ ದಿನಾಂಕ ಸಮೀಪಿಸುತ್ತಿರುವ ಔಷಧಿಗಳ ಪೂರೈಕೆಯಾಗುತ್ತಿರುವುದನ್ನು ತಡೆಯಲು ಯಾವ ಕ್ರಮ ಕೈಗೊಂಡಿದ್ದೀರಿ, ರೋಗಿಗಳ ಆರೋಗ್ಯದಲ್ಲಿ ಸಮಸ್ಯೆಯಾದರೆ ಯಾರು ಹೊಣೆ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದ ಅವರು, ನೀವು ಔಷಧಿ ತೆಗೆದುಕೊಳ್ಳುವಾಗ ಅದರ ಅವಧಿ ಮುಗಿಯಲು ಇನ್ನೂ ಒಂದು ವರ್ಷದ ಸಮಯವಿರುವಂತೆ ನೋಡಿಕೊಳ್ಳಬೇಕು. ಸರ್ಕಾರಿ ನೌಕರಿ ಅಂದರೇ ಜವಾಬ್ದಾರಿ, ಬಹಳ ಎಚ್ಚರಿಕೆಯಿಂದ ಕೆಲಸ ಮಾಡುವಂತೆ ಸೂಚಿಸಿದರು.





ನಂತರ ತಾಲ್ಲೂಕು ಪಂಚಾಯಿತಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಾರ್ವಜನಿಕರು ಸಚಿವರ ಬಳಿ ಸಮಸ್ಯೆಗಳ ಬಗ್ಗೆ ಅಳಲು ತೋಡಿಕೊಂಡರು, ಶಾಸಕ ಸಿ.ಎನ್.ಬಾಲಕೃಷ್ಣ, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಣಾಧಿಕಾರಿ ಬಿ.ಆರ್.ಪೂರ್ಣಿಮಾ, ಅಪರ ಪೊಲೀಸ್ ವರಿಷ್ಠಾಧಿಕಾರಿ ಎಂ.ಕೆ.ತಮ್ಮಯ್ಯ, ಪೊಲೀಸ್ ಉಪ ಅಧೀಕ್ಷಕ ಎನ್.ಕುಮಾರ್ ಇದ್ದರು.

**ಹೊಳೆನರಸೀಪುರದಲ್ಲಿ ಪರಿಶೀಲನೆ**

ಹೊಳೆನರಸೀಪುರ ತಾಲ್ಲೂಕಿನ ಮೂಡಲಹಿಪ್ಪೆ ಗ್ರಾಮ ಪಂಚಾಯಿತಿ ಕಚೇರಿ ಹಾಗು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಪರಿಶೀಲನೆ ನಡೆಸಿದರು.

ಚನ್ನರಾಯಪಟ್ಟಣ ಮಾರ್ಗದಿಂದ ತಾಲ್ಲೂಕಿಗೆ ಆಗಮಿಸುವ ವೇಳೆ ಮೊದಲು ಮೂಡಲಹಿಪ್ಪೆ ಗ್ರಾಮ ಪಂಚಾಯಿತಿ ಕಚೇರಿಗೆ ಭೇಟಿ ನೀಡಿದ ಅವರು, ಪಿಡಿಒ ಕೆಲಸದ ನಿಮಿತ್ತ ತಾಲ್ಲೂಕು ಕಚೇರಿಗೆ ಹೋಗಿದ್ದರಿಂದ ಸಿಬ್ಬಂದಿಯನ್ನೇ ಸಮಸ್ಯೆಗಳ ಕುರಿತು ಪ್ರಶ್ನಿಸಿದರು. ಇ-ಖಾತಾ ಮಾಡಿಕೊಡಲು ಕಾವೇರಿ ಲಾಗಿನ್‌ನಿಂದ ಬರುವ ದಾಖಲಾತಿ ಅಡಕಗೊಳಿಸಲು ತೊಡಕಾಗುತ್ತಿದೆ. ಜನರು ಹಿಂದೆಲ್ಲಾ ಖಾತೆ ತೊಡಕಿಲ್ಲದೆ ಆಗುತ್ತಿತ್ತು. ಇದೀಗ ಹೊಸ ನಿಯಮ ಅಳವಡಿಕೆಯಲ್ಲಿ ಗೊಂದಲವಾಗಿದ್ದರ ಬಗ್ಗೆ ಪ್ರಶ್ನಿಸುತ್ತಿದ್ದಾರೆ. ಇದರಿಂದ ತೊಂದರೆಯಾಗುತ್ತಿದೆ ಎಂದು ಗಮನಕ್ಕೆ ತಂದರು.

ಸಮಸ್ಯೆ ಆಲಿಸದ ಸಚಿವರು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಣಾಧಿ

» ನಾಲ್ಕನೇ ಪುಟದಲ್ಲಿ

**ಮಕ್ಕಳೊಂದಿಗೆ ಬಿಸಿಯೂಟ ಸವಿದ ಸಚಿವ**

**ಹೊಳೆನರಸೀಪುರ ತಾಲ್ಲೂಕಿನ ತಟ್ಟೆಕೆರೆ ಗ್ರಾಮದ ಸರ್ಕಾರಿ ಪ್ರೌಢಶಾಲೆಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಶಾಲಾ ಮಕ್ಕಳ ಜೊತೆ ಅವರು ಬಿಸಿಯೂಟ ಸವಿದರು. ಬಳಿಕ ಮಕ್ಕಳೊಂದಿಗೆ ಸಮಾಲೋಚನೆ ನಡೆಸಿ, ಶಿಕ್ಷಕರು-ವಿದ್ಯಾರ್ಥಿಗಳಿಂದ ಸಮಸ್ಯೆ ಆಲಿಸಿದರು. ಜಿಲ್ಲಾಧಿಕಾರಿ ಲತಾಕುಮಾರಿ, ಸಿಇಒ ಬಿ.ಆರ್.ಪೂರ್ಣಿಮಾ ಇದ್ದರು.**



# ಜಾತಿ ನಿಂದನೆ ಕಾಯ್ದೆ ದುರ್ಬಳಕೆ : ಕ್ರಮಕ್ಕೆ ವಕೀಲರ ಆಗ್ರಹ

• ಪ್ರಜೋದಯ ವರದಿ

**ಸಕಲೇಶಪುರ :** ಜಾತಿ ನಿಂದನೆ ಕಾಯ್ದೆಯನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎನ್ನಲಾದ ಪಟ್ಟಣ ಪುರಸಭೆಯ ಮುಖ್ಯಾಧಿಕಾರಿ ಮಹೇಶ್ವರಪ್ಪ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಂಡು, ಅವರನ್ನು ಕೂಡಲೇ ಸೇವೆಯಿಂದ ಅಮಾನತು ಮಾಡಬೇಕೆಂದು ಒತ್ತಾಯಿಸಿ ಪಟ್ಟಣದಲ್ಲಿ ಸೋಮವಾರ ವಕೀಲರು ಪ್ರತಿಭಟನೆ ನಡೆಸಿದರು.

ಪುರಸಭೆ ಹಾಗೂ ವಕೀಲರಾದ ಅಭಿಜ್ಞಾನ್ ಅವರ ನಡುವೆ ಪಿತ್ರಾರ್ಜಿತ ಆಸ್ತಿಗೆ ಸಂಬಂಧಿಸಿದ ವಿವಾದ ಉಂಟಾಗಿತ್ತು. ಕಳೆದ 70 ವರ್ಷಗಳಿಂದ ನಡೆಯುತ್ತಿರುವ ಸಕಲೇಶಪುರ ಜಾತ್ರೆ ಹಾಗೂ ದನಗಳ ಜಾತ್ರೆ ನಡೆಯುವ ಸುಭಾಷ್ ಮೈದಾನ ಹಾಗೂ ಪಕ್ಕದಲ್ಲಿರುವ ತಾಲೂಕು ಕ್ರೀಡಾಂಗಣದಲ್ಲಿ ಇರುವ ಆಸ್ತಿ ತಮ್ಮ ವಾರಸುದಾರರಿಂದ ತಮಗೆ ಬಂದಿದ್ದು, ಅದನ್ನು ತಮ್ಮ ತಂದೆಯ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಡಬೇಕೆಂದು ಅಭಿಜ್ಞಾನ್ ಅವರು ಪಟ್ಟಣ ಪುರಸಭೆಗೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಗೆ ಯಾವುದೇ ಪ್ರತಿಕ್ರಿಯೆ ಸಿಗದ ಹಿನ್ನಲೆಯಲ್ಲಿ, ಖಾತೆ ಬದಲಾವಣೆಯಲ್ಲಿ ಪುರಸಭೆ ಅಧಿಕಾರಿಗಳು ವಿಳಂಬ ಧೋರಣೆ ಅನುಸರಿಸುತ್ತಿದ್ದಾರೆಂದು ಆರೋಪಿಸಿ, ಕಳೆದ ವಾರ ವಕೀಲ ಹಾಗೂ ಭೂಮಾಲೀಕ ಅಭಿಜ್ಞಾನ್ ಅವರು ಜಿಲ್ಲಾಧಿಕಾರಿ ಕಚೇರಿ ಎದುರು ದಾಖಲೆಗಳನ್ನು ಎಸೆದು ಪ್ರತಿಭಟನೆ ನಡೆಸಿದ್ದರು.



ಈ ವೇಳೆ ನಡೆದ ಚರ್ಚೆಯಲ್ಲಿ, ನೀವು ತೊಂದರೆ ನೀಡಿದರೆ ನಿಮ್ಮ ವಿರುದ್ಧ ಜಾತಿ ನಿಂದನೆ ಪ್ರಕರಣ

» ನಾಲ್ಕನೇ ಪುಟದಲ್ಲಿ

## ನಾಳೆ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪ್ರೇರಣಾ ಶಿಬಿರ

**ಹೊಳೆನರಸೀಪುರ :** ಪಟ್ಟಣ ಸ್ವರ್ಣಾ ವಿದ್ಯಾ ಸಂಸ್ಥೆಯಲ್ಲಿ ಸರ್ಕಾರಿ ಹಾಗು ಖಾಸಗಿ ಶಾಲೆಗಳ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಫೆ.18 ರಂದು ಪ್ರೇರಣಾ ಶಿಬಿರ ಆಯೋಜಿಸಲಾಗಿದೆ. ಇಂಡಿಯನ್ ಜೂನಿಯರ್ ಛೇಂಬರ್‌ನ ರಾಷ್ಟ್ರೀಯ ತರಬೇತುದಾರ ಶೃಂಗೇರಿಯ ಎನ್.ಸಿ.ಪಾಂಡುರಂಗ ಶಿಬಿರ ನಡೆಸಿಕೊಡಲಿದ್ದಾರೆ. ವಿದ್ಯಾರ್ಥಿಗಳಿಗೆ ಪೆನ್, ನೋಟ್ ಪ್ಯಾಡ್ ನೀಡಲಾಗುವುದು. ವಿದ್ಯಾರ್ಥಿಗಳು ಒಂದು ವಿಷಯದ ಪಠ್ಯ ಪುಸ್ತಕ ತರುವಂತೆ ವಿದ್ಯಾಸಂಸ್ಥೆಯ ಕಾರ್ಯದರ್ಶಿ ತಿಳಿಸಿದ್ದಾರೆ.

# ಜನತಾ ನ್ಯಾಯಾಲಯ ಸದ್ಬಳಕೆಗೆ ಕರೆ

**ಮಾ.14ರವರೆಗೆ ರಾಷ್ಟ್ರೀಯ ಲೋಕ ಅದಾಲತ್: ನ್ಯಾ.ಹೇಮಾವತಿ**

• ಪ್ರಜೋದಯ ವರದಿ

**ಹಾಸನ :** ಜನವರಿ 1 ರಿಂದ 90 ದಿನಗಳವರೆಗೂ ಮಧ್ಯಸ್ಥಿಕೆಯ ಕುರಿತು ವಿಶೇಷ ಅಭಿಯಾನ ನಡೆಯುತ್ತಿದೆ. ಕಕ್ಷಿದಾರರು ನ್ಯಾಯಾಲಯಗಳಲ್ಲಿ ಬಾಕಿ ಉಳಿದಿರುವ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಬಗೆಹರಿಸಿಕೊಳ್ಳುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಹೇಮಾವತಿ ಅವರು ತಿಳಿಸಿದರು.



ಸುದ್ದಿಗಾರರಿಗೆ ಮಾಹಿತಿ ನೀಡಿದ ಅವರು, ರಾಜಿ ಸಂಧಾನವು ಶೀಘ್ರ ನ್ಯಾಯದಾನ ವ್ಯವಸ್ಥೆಯ ಅವಿಭಾಜ್ಯ ಅಂಗ. ಕಕ್ಷಿದಾರರು ಜನತಾ ನ್ಯಾಯಾಲಯದ ಸದ್ಬಳಕೆ ಮಾಡಿಕೊಳ್ಳಬೇಕು. ಸಿವಿಲ್ ಪ್ರಕರಣಗಳು, ಚೆಕ್ ಅಮಾನ್ಯ, ಮೋಟಾರ್ ವಾಹನ ಪರಿಹಾರ, ಕೌಟುಂಬಿಕ, ವಿಚ್ಛೇದನ ಪ್ರಕರಣಗಳನ್ನು ಮಧ್ಯಸ್ಥಿಕೆಯ ಮೂಲಕ ಬಗೆಹರಿಸಿಕೊಳ್ಳಲು ಅವಕಾಶವಿದ್ದು, ಸದುಪಯೋಗವನ್ನು ಪಡೆಯಬಹುದಾಗಿರುತ್ತದೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದನ್ವಯ ಮಾ.14ರ ವರೆಗೆ ರಾಷ್ಟ್ರೀಯ ಲೋಕ ಅದಾಲತ್ ಆಯೋಜಿಸಲಾಗಿದೆ. ಈ ಲೋಕ್ ಅದಾಲತ್‌ನಲ್ಲಿ

» ನಾಲ್ಕನೇ ಪುಟದಲ್ಲಿ

## ನಾಪತ್ತೆ ಹೈಡ್ರಾಮಾ: ಪತಿಯೊಂದಿಗೆ ತೆರಳಲು ನಿರಾಕರಣೆ

**ಮಹಿಳೆಯನ್ನು ಸಾಂತ್ವನ ಕೇಂದ್ರಕ್ಕೆ ಕಳುಹಿಸಿದ ಪೊಲೀಸರು**

• ಪ್ರಜೋದಯ ವರದಿ

**ಹಾಸನ:** ನಾಪತ್ತೆಯ ನಾಟಕವಾಡಿ ಪ್ರಿಯಕರನೊಂದಿಗೆ ಪತ್ತೆಯಾಗಿದ್ದ ಮಹಿಳೆ, ತನ್ನ ಪತಿಯೊಂದಿಗೆ ಸಂಸಾರ ಮುಂದುವರಿಸಲು ನಿರಾಕರಿಸಿದ ಹಿನ್ನಲೆ ಪೊಲೀಸರು ಆಕೆಯನ್ನು ಸಾಂತ್ವನ ಕೇಂದ್ರಕ್ಕೆ ಕಳುಹಿಸಿದ್ದಾರೆ.



ಕುಣಿಗಲ್ ಮೂಲದ ಪ್ರಿಯಾಂಕ (28) ಮದುವೆ ಕಾರ್ಯಕ್ಕಾಗಿ ಚಿಕ್ಕಮಗಳೂರಿಗೆ ತೆರಳಿದ್ದ ವೇಳೆ ಬೇಲೂರು ಬಸ್ ನಿಲ್ದಾಣದಿಂದ ನಾಪತ್ತೆಯಾಗಿದ್ದಳು. ಬಳಿಕ ಹಾಸನ ತಾಲ್ಲೂಕಿನ ಕಲ್ಕೆರೆ ಗ್ರಾಮದ ಕೆರೆಯ ಸಮೀಪ ಆಕೆಯ ಒಳಉಡುಪು, ಬಟ್ಟೆ, ಚಪ್ಪಲಿ ಹಾಗು ವ್ಯಾನಿಟಿ ಬ್ಯಾಗ್ ಪತ್ತೆಯಾಗಿತ್ತು. ಪೊಲೀಸರನ್ನು ದಾರಿ ತಪ್ಪಿಸಲು ಪ್ರಿಯಾಂಕ ಹಾಗು ಆಕೆಯ ಪ್ರಿಯಕರ ಸೇರಿ ಪ್ಲ್ಯಾನ್ ಮಾಡಿದ್ದರು ಎಂಬುದು ತನಿಖೆ ವೇಳೆ ಬೆಳಕಿಗೆ ಬಂದಿದೆ.

ಪೊಲೀಸರ ತನಿಖೆ ತೀವ್ರಗೊಳಿಸಿ ಪ್ರಿಯಾಂಕಳನ್ನು ಕುಣಿಗಲ್‌ನಲ್ಲಿ ಆಕೆಯ ಪ್ರಿಯಕರ ಡೇವಿಡ್ ಜೊತೆ ಪತ್ತೆಹಚ್ಚಿ ಹಾಸನಕ್ಕೆ ಕರೆತಂದು ವಿಚಾರಣೆ ನಡೆಸಿದರು. ವಿಚಾರಣೆ ವೇಳೆ ಡೇವಿಡ್‌ನೊಂದಿಗೆ ಸಂಬಂಧ ಹೊಂದಿರುವ ಬಗ್ಗೆ ಮಾಹಿತಿ ದೊರೆತ ಹಿನ್ನಲೆ ಪೊಲೀಸರು ಹಾಗು ಕುಟುಂಬಸ್ಥರು ಆಕೆಯನ್ನು ಪತಿಯೊಂದಿಗೆ ಜೀವನ ಮುಂದುವರಿಸುವಂತೆ ಮನವೊಲಿಸಲು ಪ್ರಯತ್ನಿಸಿದರು. ಆದರೆ, ಪ್ರಿಯಾಂಕ ಪತಿಯ ಮನೆಗೆ ಹಿಂತಿರುಗುವುದಿಲ್ಲವೆಂದು ಹಠ ಹಿಡಿದಿದ್ದರಿಂದ, ಪೊಲೀಸರು ಮತ್ತು ಕುಟುಂಬಸ್ಥರ ಸಮ್ಮುಖದಲ್ಲಿ ಸಮಾಲೋಚನೆ ನಡೆಸಿದ ಬಳಿಕ ಆಕೆಯನ್ನು ಸಾಂತ್ವನ ಕೇಂದ್ರಕ್ಕೆ ಕಳುಹಿಸಲಾಯಿತು.

**ಮೊಬೈಲ್ ಕರೆ ಆದರಿಸಿ ಪತ್ತೆ**

ಮೊಬೈಲ್ ಕರೆ ಹಾಗು

» ನಾಲ್ಕನೇ ಪುಟದಲ್ಲಿ

**ಸಚಿವ ಸತೀಶ್ ಜಾರಕಿಹೊಳಿಗೆ ಶಾಸಕ ಸಿಮೆಂಟ್ ಮಂಜು ಮನವಿ**

# ಸೇತುವೆಗಳ ಮರು ನಿರ್ಮಾಣಕ್ಕೆ ಅನುದಾನ ನೀಡಿ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ವಿವಿಧ ಭಾಗಗಳಲ್ಲಿ ಹೊಸ ಸೇತುವೆ ನಿರ್ಮಾಣ ಹಾಗು ಶಿಥಿಲಾವಸ್ಥೆಯಲ್ಲಿರುವ ಸೇತುವೆಗಳ ಮರು ನಿರ್ಮಾಣಕ್ಕೆ ಅನುದಾನ ಒದಗಿಸುವಂತೆ ಶಾಸಕ ಸಿಮೆಂಟ್ ಮಂಜು ಅವರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಬೆಂಗಳೂರಿನಲ್ಲಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಕಚೇರಿಯಲ್ಲಿ ಭೇಟಿ ಮಾಡಿ ಮನವಿ ಸಲ್ಲಿಸಿದ ಬಳಿಕ ಮಾತನಾಡಿದ ಅವರು, ಹಾನುಬಾಳು ಹೋಬಳಿ ಹಾದಿಗೆಯಿಂದ ಬೇಲೂರು ತಾಲ್ಲೂಕಿನ ಅರೇಹಳ್ಳಿಗೆ ಸಂಪರ್ಕ ಕಲ್ಪಿಸಲು ಹೇಮಾವತಿ ನದಿಗೆ ಅಡ್ಡಲಾಗಿ ಹೊಸ ಸೇತುವೆ ಹಾಗೂ ರಸ್ತೆ ನಿರ್ಮಾಣಕ್ಕೆ 25 ಕೋ.ರೂ. ಅನುದಾನ ಬಿಡುಗಡೆ ಮಾಡಿ ಕಾಮಗಾರಿಯನ್ನು ಶೀಘ್ರ ಅನುಷ್ಠಾನಗೊಳಿಸುವಂತೆ ಕೋರಿಕೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.



ಬೇಲೂರು ತಾಲ್ಲೂಕಿನ ಅರೇಹಳ್ಳಿ ಹೋಬಳಿ ಕೇಂದ್ರಕ್ಕೆ ಸಂಪರ್ಕಿಸುವ ಮಾರ್ಗದಲ್ಲಿ ಹೇಮಾವತಿ ನದಿಗೆ ಸೇತುವೆ ಇಲ್ಲದಿರುವುದರಿಂದ ರೈತರು, ಬೆಳೆಗಾರರು ಹಾಗೂ ಸಾರ್ವಜನಿಕರು ಹಾನುಬಾಳುವಿನಿಂದ ಸಕಲೇಶಪುರ ಮಾರ್ಗವಾಗಿ ಸುಮಾರು 42 ಕಿ.ಮೀ ಸುತ್ತಾಡಿ ತೆರಳಬೇಕಾಗಿದೆ. ಹಾನುಬಾಳು ಮತ್ತು ಅರೇಹಳ್ಳಿ ನಡುವೆ ವ್ಯಾಪಾರ-ವಹಿವಾಟು ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿರುವುದರಿಂದ ಎರಡು ಹೋಬಳಿ ಕೇಂದ್ರಗಳನ್ನು ನೇರವಾಗಿ ಸಂಪರ್ಕಿಸುವ ರಸ್ತೆ ಹಾಗೂ ಸೇತುವೆ ನಿರ್ಮಾಣದ ಅಗತ್ಯವನ್ನು ಸ್ಥಳೀಯರು ಹಲವು ಬಾರಿ ಸರ್ಕಾರದ ಹಾಗು ತಮ್ಮ ಗಮನಕ್ಕೆ ತಂದಿದ್ದರೆಂದು ಮನವರಿಕೆ ಮಾಡಿಕೊಟ್ಟರು.

ಪ್ರಸ್ತಾವಿತ ಸೇತುವೆ ನಿರ್ಮಾಣವಾದಲ್ಲಿ ಕೇವಲ 10 ಕಿ.ಮೀ ದೂರವನ್ನು ಸುಮಾರು 20 ನಿಮಿಷಗಳಲ್ಲಿ ಕ್ರಮಿಸ ಬಹುದಾಗಿ, ಪ್ರಯಾಣದ ಅವಧಿ ಕಡಿಮೆಯಾಗುವುದರೊಂದಿಗೆ ವ್ಯಾಪಾರ ಚಟುವಟಿಕೆಗಳಿಗೆ ಹಾಗೂ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುಕೂಲವಾಗಲಿದೆ. ಮಲೆನಾಡು ಹಾಗು ಬಯಲುಸೀಮೆ ಪ್ರದೇಶಗಳನ್ನು ಒಳಗೊಂಡಿರುವ ತಮ್ಮ ವಿಧಾನಸಭಾ ಕ್ಷೇತ್ರದಲ್ಲಿ ಮಳೆಗಾಲದ ವೇಳೆ ಗುಡ್ಡಗಾಡು ಗ್ರಾಮೀಣ ಪ್ರದೇಶಗಳಲ್ಲಿ ಹಳ್ಳಗಳ ನೀರಿನ ಹರಿವಿನಿಂದ ಸಂಪರ್ಕ ಕಡಿತವಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳು ಹಾಗು ಗ್ರಾಮಸ್ಥರು ತಾಲ್ಲೂಕು ಕೇಂದ್ರ ತಲುಪಲು ಸಂಕಷ್ಟ ಅನುಭವಿಸುತ್ತಿದ್ದಾರೆ. ಈ ಹಿನ್ನಲೆ ಮಳೆಗಾಲ ಪ್ರಾರಂಭವಾಗುವ ಮುನ್ನ ಕೆಳಕಂಡ ಸೇತುವೆ ಕಾಮಗಾರಿಗಳಿಗೆ ತಲಾ 5 ಕೋ.ರೂ. ಅನುದಾನ ಬಿಡುಗಡೆಗೊಳಿಸುವಂತೆ ಮನವಿ ಮಾಡಲಾಗಿದೆ ಎಂದು ತಿಳಿಸಿದರು.

ವನಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪಟ್ಲದಿಂದ ಕಳ್ಳಿಗದ್ದೆ ಬಾಣಗೇರಿ ಸಂಪರ್ಕ ಸೇತುವೆ, ಮಳಲಿ ಗ್ರಾಮ ಪಂಚಾಯಿತಿ ಮಠಸಾಗರದಿಂದ ಕೃಷ್ಣಾಪುರ ಸಂಪರ್ಕಿಸುವ ಕೀರುಹಳ್ಳ ಸೇತುವೆ, ಆಲೂರು ತಾಲ್ಲೂಕಿನ ಅಬ್ಬನ ಗ್ರಾಮ ಪಂಚಾಯಿತಿ ಆನೆಗಳಲೆ ಗ್ರಾಮ ಸೇತುವೆ, ಐಗೂರು ಗ್ರಾಮ ಪಂಚಾಯಿತಿ ದೊಡ್ಡಕಲ್ಲೂರು, ಕುಂಭಾರಗೇರಿ ಸಂಪರ್ಕಿಸುವ ಐಗೂರು ಹೊಳೆ ಸೇತುವೆ, ಕ್ಯಾಮನಹಳ್ಳಿ ಗ್ರಾಮ ಪಂಚಾಯಿತಿ ಮಾವಿನಹಳ್ಳಿ ಮದನಾಪುರ ಸಂಪರ್ಕಿಸುವ ಕಿರುಹಳ್ಳ ಸೇತುವೆಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳುವಂತೆ ಕೋರಿದರು. ಎಲ್ಲಾ ಬೇಡಿಕೆಗಳಿಗೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿರುವುದಾಗಿ ಸಿಮೆಂಟ್ ಮಂಜು ಅವರು ತಿಳಿಸಿದ್ದಾರೆ.

## ಫೆ.22 ರಂದು ಶಿಕ್ಷಣ ಇಲಾಖೆ ನೌಕರರ ಸಂಘದ ಪದ ಗ್ರಹಣ

• ಪ್ರಜೋದಯ ವರದಿ

**ಹಾಸನ:** ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಇಲಾಖೆ ನೌಕರರ ಸಂಘದ ಜಿಲ್ಲಾ ಮಟ್ಟದ ಪದಾಧಿಕಾರಿಗಳ ಸಭೆ ಹಾಗು ಪದಗ್ರಹಣ ಕಾರ್ಯಕ್ರಮ ಫೆ.22 ರಂದು ಬೆಳಿಗ್ಗೆ 10.30ಕ್ಕೆ ನಗರದ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಡಿ. ರಮೇಶ್ ಅವರು ತಿಳಿಸಿದರು.


ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಸ್ಥಾಪಿತವಾಗಿರುವ ಸಂಘಕ್ಕೆ ವರ್ಷ ತುಂಬಿದ್ದು, ಜಿಲ್ಲೆಯ 8 ತಾಲ್ಲೂಕು ಗಳಲ್ಲಿ ಕೇವಲ 1 ತಿಂಗಳೊಳಗೆ ಸಂಘಟನೆ ಬಲಪಡಿಸಲಾಗಿದೆ. ಶಿಕ್ಷಣ ಇಲಾಖೆಯ ವಿವಿಧ ವಿಭಾಗಗಳನ್ನು ಒಂದೇ ಬ್ಯಾನರ್ ಅಡಿ ಒಗ್ಗೂಡಿಸುವ ಏಕೈಕ ಮತ್ತು ಪ್ರಥಮ ಸಂಘವೆಂಬ ಹೆಗ್ಗಳಿಕೆ ಪಡೆದಿದೆ. ಜಿಲ್ಲೆಯ ಎಲ್ಲಾ ನೌಕರರು ಸಂಘದ ಕಾರ್ಯವೈಖರಿ ತಿಳಿದು ಸದಸ್ಯತ್ವ ಪಡೆಯುವಂತೆ ಮನವಿ ಮಾಡಿದರು.

» ನಾಲ್ಕನೇ ಪುಟದಲ್ಲಿ

# ಸಣ್ಣ ದೇಹ, ಅಗಾಧ ವೇಗ

## ವಿಜ್ಞಾನವೇ ಬೆರಗಾಗುವ ಹಮ್ಮಿಂಗ್ ಬರ್ಡ್ ಲೋಕ

**» ಹಮ್ಮಿಂಗ್ ಬರ್ಡ್‌ಗಳು ಸಾಮಾನ್ಯವಾಗಿ ಕೇವಲ ಎಂಟರಿಂದ ಇಪ್ಪತ್ತು ಗ್ರಾಮ್ ತೂಕವಿರುತ್ತವೆ. ಅಂದರೆ, ನಮ್ಮ ಕೈಯಲ್ಲಿರುವ ಹತ್ತು ರುಪಾಯಿ ನಾಣ್ಯಕ್ಕಿಂತಲೂ ಇವು ಹಗುರ! ಆದರೆ, ಈ ಪುಟ್ಟ ದೇಹದೊಳಗೆ ಒಬ್ಬ ದೀರ್ಘಾವಧಿ ಓಟಗಾರನಿಗೆ ಇರಬೇಕಾದ ಸರ್ವ ಸಾಮರ್ಥ್ಯವೂ ಅಡಗಿದೆ. ಇವುಗಳ ಹೃದಯ ಬಡಿತ ಮತ್ತು ಶಕ್ತಿಯ ವ್ಯಯದ ಪ್ರಮಾಣವು ಭೂಮಿಯ ಮೇಲಿನ ಯಾವುದೇ ಪ್ರಾಣಿಗಿಂತಲೂ ಹೆಚ್ಚು.**



ಇದೇ ಅಂತರಂಗ ಸುದ್ದಿ

ಒಂದು ಖಾಸಗಿ ವಿಮಾನ ಹಾರಲು ರನ್‌ವೇ, ಪೈಲಟ್, ಇಂಧನ ಮತ್ತು ಸಂಕೀರ್ಣ ತಂತ್ರಜ್ಞಾನ ಬೇಕು. ಆದರೆ ಹಮ್ಮಿಂಗ್ ಬರ್ಡ್ ಕೇವಲ ತನ್ನ ಸಹಜ ಪ್ರವೃತ್ತಿ ಮತ್ತು ವಿಕಸನಗೊಂಡ ದೇಹದ ರಚನೆಯನ್ನು ನಂಬಿ ಹಾರುತ್ತದೆ. ಇವುಗಳಿಗೆ ಯಾವುದೇ ನಕ್ಷೆ ಅಥವಾ ಜಿಪಿಎಸ್ ಇಲ್ಲದಿದ್ದರೂ, ಸಾವಿರಾರು ಮೈಲಿಗಳ ದಾರಿಯನ್ನು ಚೂರೂ ದಾರಿ ತಪ್ಪದೇ ಕ್ರಮಿಸ ಬಲ್ಲವು. ಇವುಗಳ ಮೆಟಬಾಲಿಸಂ ಎಷ್ಟು ವೇಗವಾಗಿದೆಯೆಂದರೆ, ಅವು ನಿರಂತರವಾಗಿ ಶಕ್ತಿಯನ್ನು ಉತ್ಪಾದಿಸುತ್ತಲೇ ಇರುತ್ತವೆ.

ಪ್ರಕೃತಿಯ ಸೃಷ್ಟಿಯಲ್ಲಿ ಗಾತ್ರಕ್ಕೂ ಶಕ್ತಿಗೂ ಸಂಬಂಧವಿಲ್ಲ ಎಂಬುದಕ್ಕೆ ಹಮ್ಮಿಂಗ್ ಬರ್ಡ್ (ಮಧುಪಕ್ಕಿ) ಅತ್ಯುತ್ತಮ ಉದಾಹರಣೆ. ಒಂದು ಚಾಕಲೇಟ್‌ನಷ್ಟು ತೂಕವಿರುವ ಈ ಪುಟ್ಟ ಹಕ್ಕಿ, ಸಾವಿರಾರು ಕಿ.ಮೀ. ಹಾರಾಟ ನಡೆಸುವ ಸಾಹಸಗಾಥೆಯನ್ನು ಕೇಳಿದರೆ ಅಚ್ಚರಿಯಾಗುವುದು ಸಹಜ. ಹಮ್ಮಿಂಗ್ ಬರ್ಡ್‌ಗಳು ಸಾಮಾನ್ಯವಾಗಿ ಕೇವಲ ಎಂಟರಿಂದ ಇಪ್ಪತ್ತು ಗ್ರಾಮ್ ತೂಕವಿರುತ್ತವೆ. ಅಂದರೆ, ನಮ್ಮ ಕೈಯಲ್ಲಿರುವ ಹತ್ತು ರುಪಾಯಿ ನಾಣ್ಯಕ್ಕಿಂತಲೂ ಇವು ಹಗುರ!

ಆದರೆ, ಈ ಪುಟ್ಟ ದೇಹದೊಳಗೆ ಒಬ್ಬ ದೀರ್ಘಾವಧಿ ಓಟಗಾರನಿಗೆ ಇರಬೇಕಾದ ಸರ್ವ ಸಾಮರ್ಥ್ಯವೂ ಅಡಗಿದೆ. ಇವುಗಳ ಹೃದಯ ಬಡಿತ ಮತ್ತು ಶಕ್ತಿಯ ವ್ಯಯದ ಪ್ರಮಾಣವು ಭೂಮಿಯ ಮೇಲಿನ ಯಾವುದೇ ಪ್ರಾಣಿಗಿಂತಲೂ ಹೆಚ್ಚು.

ಹಮ್ಮಿಂಗ್ ಬರ್ಡ್‌ಗಳ ವಲಸೆಯ ಹಾದಿಯಲ್ಲಿ ಅತ್ಯಂತ ಕಠಿಣವಾದ ಹಂತವೆಂದರೆ ಮೆಕ್ಸಿಕೋ ಕೊಲ್ಲಿಯನ್ನು ದಾಟುವ ಅದರ ಪ್ರಯತ್ನ. ಸುಮಾರು 800 ಕಿ.ಮೀ.ಗಳಿಗೂ ಅಧಿಕ ವಿಸ್ತಾರವಿರುವ ಈ ಸಮುದ್ರದ ಮೇಲೆ ಹಾರುವಾಗ ವಿಶ್ರಾಂತಿ ಪಡೆಯಲು ಅವುಗಳಿಗೆ ಎಲ್ಲಿಯೂ ಜಾಗವಿರುವುದಿಲ್ಲ.

ಗಾಳಿ ಮತ್ತು ಹವಾಮಾನದ ಏರುಪೇರುಗಳನ್ನು ಎದುರಿಸುತ್ತಾ, ಈ ಹಕ್ಕಿಗಳು ಸುಮಾರು 20 ಗಂಟೆಗಳ ಕಾಲ ಸತತವಾಗಿ ಹಾರುತ್ತವೆ. ಹಾರಾಟದ ಸಮಯದಲ್ಲಿ ಇವು ರೆಕ್ಕೆಗಳನ್ನು ಸೆಕೆಂಡಿಗೆ ಸುಮಾರು 80 ಬಾರಿ ಬಡಿಯುತ್ತವೆ.

ಇದು ವಿಜ್ಞಾನಕ್ಕೂ ನಿಲುಕದ ಅದ್ಭುತ ಸಂಗತಿ. ಒಂದು ಸಣ್ಣ ವಿಮಾನವು ಸುದೀರ್ಘ ಹಾರಾಟ ನಡೆಸಲು ಇಂಧನ ಬೇಕು. ಹಮ್ಮಿಂಗ್ ಬರ್ಡ್ ಕೂಡ ತನ್ನ ಸುದೀರ್ಘ ಪ್ರಯಾಣಕ್ಕೆ ಮೊದಲು ತಯಾರಿಯನ್ನು ನಡೆಸುತ್ತದೆ.

ವಲಸೆ ಆರಂಭಿಸುವ ಮುನ್ನ ಈ ಹಕ್ಕಿಗಳು ಹೂವಿನ ಮಕರಂದ ಮತ್ತು ಸಣ್ಣ ಕೀಟಗಳನ್ನು ಅತಿಯಾಗಿ ಸೇವಿಸುತ್ತವೆ. ಅಂದರೆ ತಮ್ಮ ದೇಹದ ತೂಕವನ್ನು ಇವು ಸುಮಾರು ಎರಡು ಪಟ್ಟು ಹೆಚ್ಚಿಸಿಕೊಳ್ಳುತ್ತವೆ. ಹೀಗೆ ಸಂಗ್ರಹವಾದ ಕೊಬ್ಬು, ಅವು ಸಮುದ್ರ ದಾಟುವಾಗ ಅಗತ್ಯವಿರುವ ಶಕ್ತಿಯನ್ನು ಒದಗಿಸುತ್ತದೆ.

ಒಂದು ಖಾಸಗಿ ವಿಮಾನ ಹಾರಲು ರನ್‌ವೇ, ಪೈಲಟ್, ಇಂಧನ ಮತ್ತು ಸಂಕೀರ್ಣ ತಂತ್ರಜ್ಞಾನ ಬೇಕು. ಆದರೆ ಹಮ್ಮಿಂಗ್ ಬರ್ಡ್ ಕೇವಲ ತನ್ನ ಸಹಜ ಪ್ರವೃತ್ತಿ ಮತ್ತು ವಿಕಸನಗೊಂಡ ದೇಹದ ರಚನೆಯನ್ನು ನಂಬಿ ಹಾರುತ್ತದೆ.

ಇವುಗಳಿಗೆ ಯಾವುದೇ ನಕ್ಷೆ ಅಥವಾ ಜಿಪಿಎಸ್ ಇಲ್ಲದಿದ್ದರೂ, ಸಾವಿರಾರು ಮೈಲಿಗಳ ದಾರಿಯನ್ನು ಚೂರೂ ದಾರಿ ತಪ್ಪದೇ ಕ್ರಮಿಸಬಲ್ಲವು. ಇವುಗಳ ಮೆಟಬಾಲಿಸಂ ಎಷ್ಟು ವೇಗವಾಗಿದೆಯೆಂದರೆ, ಅವು ನಿರಂತರವಾಗಿ ಶಕ್ತಿಯನ್ನು ಉತ್ಪಾದಿಸುತ್ತಲೇ ಇರುತ್ತವೆ.

ವಿಜ್ಞಾನಿಗಳು ಇಂದಿಗೂ ಹಮ್ಮಿಂಗ್ ಬರ್ಡ್‌ನ ಸಾಮರ್ಥ್ಯದ ಬಗ್ಗೆ ಸಂಶೋಧನೆ ನಡೆಸುತ್ತಲೇ ಇದ್ದಾರೆ. ಇಷ್ಟು ಸಣ್ಣ ಹೃದಯವು ಅಷ್ಟು ದೊಡ್ಡ ಪ್ರಯಾಣವನ್ನು ಹೇಗೆ ಸಂಭಾಳಿಸುತ್ತದೆ? ದಾರಿ ತಪ್ಪದೇ ಅದೇ ಜಾಗಕ್ಕೆ ಪ್ರತಿ ವರ್ಷ ಹೇಗೆ ಮರಳುತ್ತದೆ? ಎಂಬುದು ಕುತೂಹಲಕಾರಿ ವಿಷಯ. ಈ ಹಕ್ಕಿಗಳ ಹಾರಾಟದ ವಿನ್ಯಾಸವನ್ನು ನೋಡಿ ವಿಮಾನಗಳ ವಿನ್ಯಾಸದಲ್ಲಿ ಬದಲಾವಣೆ ತರುವ ಬಗ್ಗೆಯೂ ಆಗಾಗ ಚರ್ಚೆಗಳು ನಡೆಯುತ್ತಿರುತ್ತವೆ.

ಹಮ್ಮಿಂಗ್ ಬರ್ಡ್ ಜೀವನಶೈಲಿಯನ್ನು ಆಳವಾಗಿ ಅಭ್ಯಾಸ ಮಾಡಿದಾಗ, ಇವು ಕೇವಲ ಹಕ್ಕಿಗಳಲ್ಲ, ಬದಲಿಗೆ ಪ್ರಕೃತಿಯ ಹೈ-ಟೆಕ್ ವಿಮಾನಗಳು ಎಂಬುದು ಸ್ಪಷ್ಟವಾಗುತ್ತದೆ. ಹಮ್ಮಿಂಗ್ ಬರ್ಡ್‌ಗಳು ತಮ್ಮ ಗಾತ್ರಕ್ಕೆ ಹೋಲಿಸಿದರೆ ಜಗತ್ತಿನ ಅತಿ ಉದ್ದದ ಪ್ರಯಾಣ ಮಾಡುವ ಜೀವಿಗಳಲ್ಲಿ ಒಂದು. ಇವುಗಳ ವಲಸೆಯು ಕೇವಲ ಸ್ಥಳ ಬದಲಾವಣೆಯಲ್ಲ, ಅದು ಬದುಕುಳಿಯುವಿಕೆಗಾಗಿ ಮಾಡುವ ಒಂದು ಸಾಹಸ.

ಉತ್ತರ ಅಮೆರಿಕದಂಥ ಪ್ರದೇಶಗಳಲ್ಲಿ ಚಳಿಗಾಲ ಆರಂಭವಾದಾಗ ಹೂವುಗಳು ಬಾಡಿ ಹೋಗುತ್ತವೆ ಮತ್ತು ಕೀಟಗಳ ಸಂಖ್ಯೆ ಕಡಿಮೆಯಾಗುತ್ತದೆ. ಹಮ್ಮಿಂಗ್ ಬರ್ಡ್‌ಗಳಿಗೆ ಬದುಕಲು ನಿರಂತರ ಆಹಾರದ ಅವಶ್ಯಕತೆ ಇರುವುದರಿಂದ, ಅವು ಬೆಚ್ಚಗಿನ ವಾತಾವರಣವಿರುವ ದಕ್ಷಿಣದತ್ತ (ಮೆಕ್ಸಿಕೋ ಮತ್ತು ಮಧ್ಯ ಅಮೆರಿಕ) ಮುಖ ಮಾಡುತ್ತವೆ.

ರೂಬಿ-ಥ್ರೋಟೆಡ್ ಹಮ್ಮಿಂಗ್ ಬರ್ಡ್ ಪೂರ್ವ ಉತ್ತರ ಅಮೆರಿಕದಿಂದ ಮೆಕ್ಸಿಕೋ ಕೊಲ್ಲಿಯವರೆಗೆ ಪ್ರಯಾಣಿಸುತ್ತವೆ. ಇವುಗಳ ದಾರಿಯಲ್ಲಿ ಯಾವುದೇ ಮರಗಿಡಗಳಿಲ್ಲದ ಸುಮಾರು 800 ಕಿಲೋಮೀಟರ್‌ಗಳ ವಿಶಾಲವಾದ ಸಮುದ್ರವಿದೆ. ಈ ದೂರವನ್ನು ಅವು ಒಂದೇ ಸಮನೆ ಹಾರುತ್ತಾ ದಾಟುತ್ತವೆ. ರೂಫಸ್ ಹಮ್ಮಿಂಗ್ ಬರ್ಡ್ ಅಲಾಸ್ಕಾದಿಂದ ಮೆಕ್ಸಿಕೋವರೆಗೆ ಸುಮಾರು 6000 ಕಿ.ಮೀ.ಗಳಿಗಿಂತ ಹೆಚ್ಚು ದೂರ ಪ್ರಯಾಣಿಸುತ್ತವೆ. ಇಷ್ಟು ಚಿಕ್ಕ ಹಕ್ಕಿಗೆ ಇದು ಜಗತ್ತಿನ ಅರ್ಧದಷ್ಟು ಸುತ್ತು ಬಂದಂತೆ!

ಇವುಗಳಿಗೆ ಜಿಪಿಎಸ್ ಇಲ್ಲದಿದ್ದರೂ, ಪ್ರತಿ ವರ್ಷ ಹಳೆಯ ಜಾಗವನ್ನೇ ಹುಡುಕಿಕೊಂಡು ಬರುತ್ತವೆ. ಸಂಶೋಧನೆಯ ಪ್ರಕಾರ, ಇವು ಭೂಮಿಯ ಕಾಂತೀಯ ಕ್ಷೇತ್ರ, ಸೂರ್ಯನ ಸ್ಥಾನ ಮತ್ತು ತಮ್ಮ ಅದ್ಭುತ ನೆನಪಿನ ಶಕ್ತಿಯನ್ನು ಬಳಸಿ ದಾರಿ ಗುರುತಿಸುತ್ತವೆ. ಕಳೆದ ವರ್ಷ ಈ ದಿನ ನಾವು ಯಾವ ಹೋಟೆಲಿನಲ್ಲಿ ಆಹಾರ ಸೇವಿಸಿದ್ದೆವು ಎಂಬುದು ನಮಗೆ ನೆನಪಿರುವುದಿಲ್ಲ. ಆದರೆ ಅವು ಕಳೆದ ವರ್ಷ ಯಾವ ಹೂವಿನ ಗಿಡದಲ್ಲಿ ಮಕರಂದ ಹೀರಿದ್ದವು ಎಂಬುದನ್ನು ಸಹ ನೆನಪಿಟ್ಟುಕೊಳ್ಳುತ್ತವೆಯಂತೆ.

ಹಮ್ಮಿಂಗ್ ಬರ್ಡ್‌ಗಳ ಆಹಾರದ ಶೇ. 90ರಷ್ಟು ಭಾಗ ಹೂವಿನ ಮಕರಂದದಿಂದ ಕೂಡಿರುತ್ತದೆ. ಮಕರಂದವು ಸಕ್ಕರೆಯ ಅಂಶದಿಂದ ತುಂಬಿದ್ದು, ಇವುಗಳ ವೇಗದ ಹಾರಾಟಕ್ಕೆ ಬೇಕಾದ ತ್ವರಿತ ಶಕ್ತಿಯನ್ನು ನೀಡುತ್ತದೆ. ಒಂದು ಹಮ್ಮಿಂಗ್ ಬರ್ಡ್ ಪ್ರತಿದಿನ ತನ್ನ ದೇಹದ ತೂಕಕ್ಕಿಂತ ಸುಮಾರು ಎರಡು ಪಟ್ಟು ಹೆಚ್ಚು ಮಕರಂದವನ್ನು ಸೇವಿಸುತ್ತದೆ. ಮನುಷ್ಯರಿಗೆ ಹೋಲಿಸಿದರೆ, ನಾವು ದಿನಕ್ಕೆ ಐದಾರು ಕೆ.ಜಿ. ಆಹಾರ ಸೇವಿಸಿದಂತೆ!

ಇವುಗಳಿಗೆ ಕೆಂಪು ಮತ್ತು ಕಿತ್ತಳೆ ಬಣ್ಣದ ಹೂವುಗಳೆಂದರೆ ಪಂಚಪ್ರಾಣ. ದೀರ್ಘವಾದ ಕೊಳವೆಯಂಥ ಹೂವುಗಳನ್ನು ಇವು ಸುಲಭವಾಗಿ ಹೀರುತ್ತವೆ. ಕೇವಲ ಸಕ್ಕರೆಯಿಂದಲೇ ಜೀವಿಸಲು ಸಾಧ್ಯವಿಲ್ಲ, ಸ್ನಾಯುಗಳ ಬೆಳವಣಿಗೆ ಮತ್ತು ಮೊಟ್ಟೆ ಇಡಲು ಇವುಗಳಿಗೆ ಪ್ರೊಟೀನ್ ಬೇಕು. ಇದಕ್ಕಾಗಿ ಇವು ಸಣ್ಣ ಜೇಡಗಳು, ಸೊಳ್ಳೆಗಳು ಮತ್ತು ಹಾರುವ ಕೀಟಗಳನ್ನು ತಿನ್ನುತ್ತವೆ. ಗಾಳಿಯಲ್ಲಿ ಹಾರುತ್ತಿರುವಾಗಲೇ ಕೀಟಗಳನ್ನು ಹಿಡಿಯುವ ಕಲೆ ಇವುಗಳಿಗೆ ಸಿದ್ಧಿಸಿದೆ.

ಇವುಗಳ ನಾಲಿಗೆಯು ದಾರದ ಎಳೆಯಂತೆ ಇರುತ್ತದೆ ಮತ್ತು ತುದಿಯಲ್ಲಿ ಎರಡು ಭಾಗಗಳಾಗಿ ಸೀಳಿರುತ್ತದೆ. ಮಕರಂದವನ್ನು ಹೀರುವಾಗ ಇವುಗಳ ನಾಲಿಗೆಯು ಸೆಕೆಂಡಿಗೆ ಸುಮಾರು 15-20 ಬಾರಿ ಹೂವಿನೊಳಗೆ ಹೋಗಿ ಬರುತ್ತದೆ. ಇದು ಪೈಪ್ ಮೂಲಕ ನೀರು ಕುಡಿದಂತೆ ಇರದೇ, ಒಂದು ಸ್ಪಂಜು ದ್ರವವನ್ನು ಹೀರಿದಂತೆ ಕೆಲಸ ಮಾಡುತ್ತದೆ.

ಇಷ್ಟು ವೇಗವಾಗಿ ಶಕ್ತಿಯನ್ನು ವ್ಯಯಿಸುವ ಈ ಹಕ್ಕಿಗಳಿಗೆ ರಾತ್ರಿಯ ವೇಳೆ ಆಹಾರವಿಲ್ಲದೇ ಬದುಕುವುದು ಕಷ್ಟ. ಹೀಗಾಗಿ ಇವು ಒಂದು ಅದ್ಭುತ ತಂತ್ರವನ್ನು ಬಳಸುತ್ತವೆ, ಅದಕ್ಕೆ ಟಾರ್ಪರ್ ಎಂದು ಹೆಸರು. ರಾತ್ರಿಯ ಸಮಯದಲ್ಲಿ ಇವು ತಮ್ಮ ದೇಹದ ಉಷ್ಣತೆಯನ್ನು ಮತ್ತು ಹೃದಯ ಬಡಿತವನ್ನು ತೀವ್ರವಾಗಿ ಕಡಿಮೆ ಮಾಡಿಕೊಳ್ಳುತ್ತವೆ.

ಹಾರುವಾಗ ನಿಮಿಷಕ್ಕೆ 1200ರಷ್ಟಿರುವ ಹೃದಯ ಬಡಿತವು, ಟಾರ್ಪರ್ ಸ್ಥಿತಿಯಲ್ಲಿ ನಿಮಿಷಕ್ಕೆ 50ಕ್ಕೆ ಇಳಿಯುತ್ತದೆ. ಇದು ಸತ್ತಂತೆ ಕಾಣುವ ಒಂದು ಗಾಢನಿದ್ರೆಯ ಸ್ಥಿತಿ. ಬೆಳಗ್ಗೆ ಸೂರ್ಯನ ಬಿಸಿಲು ತಾಕಿದ ತಕ್ಷಣ ಇವು ಮತ್ತೆ ಚೈತನ್ಯ ಪಡೆದು ಎದ್ದೇಳುತ್ತವೆ.

ಹಮ್ಮಿಂಗ್ ಬರ್ಡ್‌ಗಳು ಹಾರುವ ರೀತಿ ಪಕ್ಷಿ ಲೋಕದ ವಿಶಿಷ್ಟ, ಇವು ಕೇವಲ ಮುಂದಕ್ಕೆ ಮಾತ್ರವಲ್ಲ, ಹಿಂದಕ್ಕೆ, ಪಕ್ಕಕ್ಕೆ ಮತ್ತು ತಲೆಕೆಳಗಾಗಿಯೂ ಹಾರಬಲ್ಲವು. ಹೆಲಿಕಾಪ್ಟರ್‌ನಂತೆ ಒಂದೇ ಕಡೆ ಸ್ಥಿರವಾಗಿ ಗಾಳಿಯಲ್ಲಿ ನಿಲ್ಲುವ ಸಾಮರ್ಥ್ಯ ಇವುಗಳಿಗಿದೆ.

ಬೇರೆ ಹಕ್ಕಿಗಳು ರೆಕ್ಕೆಯನ್ನು ಕೆಳಕ್ಕೆ ಬಡಿದಾಗ ಮಾತ್ರ ಶಕ್ತಿ ಪಡೆಯುತ್ತವೆ, ಆದರೆ ಹಮ್ಮಿಂಗ್ ಬರ್ಡ್‌ಗಳು ರೆಕ್ಕೆಯನ್ನು ಮೇಲೆ ಮತ್ತು ಕೆಳಗೆ ಎರಡೂ ಬಾರಿ ಬಡಿದಾಗಲೂ ಶಕ್ತಿಯನ್ನು ಪಡೆಯುತ್ತವೆ. ಇವುಗಳ ರೆಕ್ಕೆಗಳು 8 ಆಕಾರದ ಮಾದರಿಯಲ್ಲಿ ಚಲಿಸುತ್ತವೆ.

ಹಮ್ಮಿಂಗ್ ಬರ್ಡ್‌ಗಳ ಜೀವನವು ನಮಗೆ ಏನನ್ನು ಕಲಿಸುತ್ತದೆ? ಮೊದಲಿಗೆ, ಸವಾಲುಗಳನ್ನು ಎದುರಿಸುವ ಹಠವನ್ನು ಕಲಿಸುತ್ತದೆ. ಈ ಹಕ್ಕಿ ನಮಗೆ ಇನ್ನೊಂದು ದೊಡ್ಡ ಪಾಠವನ್ನು ಕಲಿಸುತ್ತದೆ- ಸಾಮರ್ಥ್ಯವು ಗಾತ್ರದಲ್ಲಿಲ್ಲ, ಸಂಕಲ್ಪದಲ್ಲಿದೆ. ಇಡೀ ಜಗತ್ತು ಹಗುರವಾಗಿ ಕಾಣುವ ಈ ಹಕ್ಕಿ, ಪ್ರಕೃತಿಯ ಅತಿ ಕಠಿಣ ಪ್ರಯಾಣವನ್ನು ಪೂರೈಸುತ್ತದೆ.

ಒಂದು ಸಣ್ಣ ಗಾಳಿಗೂ ಹಾರಿ ಹೋಗಬಹುದಾದ ಇಷ್ಟು ನಾಜೂಕಾದ ಹಕ್ಕಿ, ಸಾವಿರಾರು ಮೈಲಿಗಳ ಸಮುದ್ರವನ್ನು ದಾಟುತ್ತದೆ ಎಂದರೆ ಅದಕ್ಕೆ ಕಾರಣ ಅದರ ಅದಮ್ಯ ಇಚ್ಛಾಶಕ್ತಿ. ಇವುಗಳ ಆಹಾರ ಪದ್ಧತಿ ಮತ್ತು ವಲಸೆಯ ಕ್ರಮವು ಪರಿಸರ ವ್ಯವಸ್ಥೆಯಲ್ಲಿ ಪರಾಗ ಸ್ಪರ್ಶಕ್ಕೂ ಬಹಳ ಮುಖ್ಯವಾಗಿದೆ. ಈ ಸುಂದರ, ಪುಟ್ಟ ಹಕ್ಕಿ ಪರಿಸರ ಮಾಲಿನ್ಯ ಮತ್ತು ಹವಾಮಾನ ಬದಲಾವಣೆಯಿಂದಾಗಿ ಅಪಾಯ ಎದುರಿಸುತ್ತಿದೆ. ಇದನ್ನು ಸಂರಕ್ಷಿಸುವುದು ಪ್ರಕೃತಿಯ ಸಮತೋಲನ ಕಾಯ್ದುಕೊಳ್ಳಲು ಅತಿ ಅವಶ್ಯಕ.



## ತಪ್ಪು ಮಾಡದಿದ್ದರೂ ಸೋಲಬಹುದು!

ನೋಕಿಯಾ ಸಂಸ್ಥೆಯ ಸಿಇಒ ಸ್ಟೀಫನ್ ಎಲೋಪ್ ಅವರು ಮೈಕ್ರೊಸಾಫ್ಟ್ ಕಂಪನಿಯು ನೋಕಿಯಾವನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯ ಕೊನೆಯಲ್ಲಿ, ಪತ್ರಿಕಾಗೋಷ್ಠಿಯಲ್ಲಿ ಕಣ್ಣೀರು ಹಾಕುತ್ತಾ ಹೇಳಿದ ಆ ಮಾತು, ಇಂದಿಗೂ ಕಾರ್ಪೊರೇಟ್ ಜಗತ್ತಿನಲ್ಲಿ ಪ್ರತಿಧ್ವನಿಸುತ್ತಿರುತ್ತದೆ. ಕಾರ್ಪೊರೇಟ್ ಲೋಕ ಈ ಮಾತನ್ನು ಮರೆಯುವುದು ಸಾಧ್ಯವೇ ಇಲ್ಲ.

ನಾವು ತಪ್ಪೇನೂ ಮಾಡಲಿಲ್ಲ... ಆದರೆ ಹೇಗೋ, ನಾವು ಸೋತೆವು. ಈ ಮಾತು ಕೇವಲ ಒಂದು ಕಂಪನಿ ತನ್ನ ಸೋಲನ್ನು ಒಪ್ಪಿಕೊಂಡ ಹೇಳಿಕೆಯಲ್ಲ, ಇದು ಇಡೀ ಜಗತ್ತಿಗೆ, ಪ್ರತಿಯೊಬ್ಬ ಉದ್ಯಮಿಗೆ ಮತ್ತು ಪ್ರತಿಯೊಬ್ಬ ವ್ಯಕ್ತಿಗೆ ನೀಡಿದ ಗಂಭೀರ ಎಚ್ಚರಿಕೆ.

ನೋಕಿಯಾದ ಪತನವು ಸೋಮಾರಿತನದಿಂದಾಗಲಿ ಅಥವಾ ಪ್ರತಿಭೆಯ ಕೊರತೆಯಿಂದಾಗಲಿ ಆಗಿದ್ದಲ್ಲ. ಅದು ಪತನವಾಗಿದ್ದು, ಜಗತ್ತು ತನಗಿಂತ ವೇಗವಾಗಿ ಬದಲಾದಾಗ, ಆ ಬದಲಾವಣೆಗೆ ತಕ್ಕಂತೆ ತನ್ನನ್ನು ತಾನು ಬದಲಾಯಿಸಿಕೊಳ್ಳದ ಕಾರಣಕ್ಕಾಗಿ. 1990 ಮತ್ತು 2000ರ ದಶಕದಲ್ಲಿ ಮೊಬೈಲ್ ಫೋನ್ ಎಂದರೆ ಅದು ನೋಕಿಯಾ ಮಾತ್ರವಾಗಿತ್ತು.

ಜಗತ್ತಿನ ಅತಿ ದೊಡ್ಡ ಮೊಬೈಲ್ ಕಂಪನಿ ಅದಾಗಿತ್ತು. ಭಾರತವನ್ನೂ ಒಳಗೊಂಡಂತೆ ಪ್ರಪಂಚದಾದ್ಯಂತ ಪ್ರತಿಯೊಬ್ಬರ ಜೇಬಿನಲ್ಲೂ ನೋಕಿಯಾ ಫೋನ್ ಇರುತ್ತಿತ್ತು. ಅದರ ಬ್ಯಾಟರಿ ಬಾಳಿಕೆ, ಕೆಳಗೆ ಬಿದ್ದರೂ ಒಡೆಯದ ಗಟ್ಟಿತನ ಮತ್ತು ಜನಪ್ರಿಯ ಸ್ನೇಕ್ ಗೇಮ್ ಎಲ್ಲರ ಮನ ಗೆದ್ದಿತ್ತು. ಅಷ್ಟಕ್ಕೂ ನೋಕಿಯಾ ಕೇವಲ ಒಂದು ಫೋನ್ ಆಗಿರಲಿಲ್ಲ.

ಅದೊಂದು ಅಂತಸ್ತು ಮತ್ತು ವಿಶ್ವಾಸದ ಸಂಕೇತವಾಗಿತ್ತು. ಆ ಸಮಯದಲ್ಲಿ ನೋಕಿಯಾ ಸಂಸ್ಥೆಯ ಬಳಿ ಹಣವಿತ್ತು, ಜಗತ್ತಿನ ಶ್ರೇಷ್ಠ ಎಂಜಿನಿಯರ್‌ಗಳಿದ್ದರು ಮತ್ತು ಮಾರುಕಟ್ಟೆಯ ಮೇಲೆ ಏಕಚಕ್ರಾಧಿಪತ್ಯವಿತ್ತು. ಅವರು ತಮ್ಮ ಕ್ಷೇತ್ರದಲ್ಲಿ ರಾಜರಾಗಿದ್ದರು. ಆದರೆ ಅದೇ ಯಶಸ್ಸು ಅವರ ಕಣ್ಣಿಗೆ ಕಪ್ಪು ಬಟ್ಟೆ ಕಟ್ಟಿತ್ತು.

2007ರಲ್ಲಿ ಸ್ಟೀವ್ ಜಾಬ್ಸ್ ಐಫೋನ್ ಅನ್ನು ಬಿಡುಗಡೆ ಮಾಡಿದಾಗ ಜಗತ್ತು ಬದಲಾಯಿತು. ಅದು ಕೇವಲ ಫೋನ್ ಆಗಿರಲಿಲ್ಲ. ಅದೊಂದು ಕಂಪ್ಯೂಟರ್ ಆಗಿತ್ತು. ಟಚ್ ಸ್ಕ್ರೀನ್, ಇಂಟರ್‌ನೆಟ್ ಮತ್ತು ಆಪ್‌ಗಳು ಮೊಬೈಲ್ ಪ್ರಪಂಚದ ಭವಿಷ್ಯ ಎಂದು ಆಪಲ್ ಸಾರಿ ಹೇಳಿತು. ಸ್ವಲ್ಪ ಸಮಯದ ನಂತರ ಗೂಗಲ್ ಆಂಡ್ರಾಯ್ಡ್ ಮೂಲಕ ಸ್ಮಾರ್ಟ್ ಫೋನ್ ಕ್ರಾಂತಿಗೆ ಕೈಜೋಡಿಸಿತು. ಆದರೆ ನೋಕಿಯಾ ಏನು ಮಾಡಿತು? ನೋಕಿಯಾ ಈ ಬದಲಾವಣೆಯನ್ನು ಗಂಭೀರವಾಗಿ ಪರಿಗಣಿಸಲಿಲ್ಲ.

ಜನರು ಕೀಪ್ಯಾಡ್ ಫೋನ್‌ಗಳನ್ನೇ ಇಷ್ಟಪಡುತ್ತಾರೆ, ಟಚ್ ಸ್ಕ್ರೀನ್ ಫೋನ್‌ಗಳು ಬಿದ್ದು ಹೋದರೆ ಒಡೆಯುತ್ತವೆ, ಬ್ಯಾಟರಿ ನಿಲ್ಲುವುದಿಲ್ಲ ಎಂಬ ಹಳೆಯ ನಂಬಿಕೆಯ ನೋಕಿಯಾ ಮುಂದುವರಿಯಿತು. ಕಂಪನಿಯವರು ತಮ್ಮ ಹಳೆಯ ಸಾಫ್ಟ್‌ವೇರ್ ಆದ ಸಿಂಬಿಯಾನ್ ಅನ್ನೇ ನೆಚ್ಚಿಕೊಂಡರು.

ಆಂಡ್ರಾಯ್ಡ್ ಜತೆ ಕೈಜೋಡಿಸಲು ನಿರಾಕರಿಸಿದರು. ಯಾವಾಗ ಅವರು ಎಚ್ಚೆತ್ತು ಕೊಂಡರೋ, ಆಗಲೇ ಕಾಲ ಮಿಂಚಿಹೋಗಿತ್ತು. ಸ್ಯಾಮ್ಸಂಗ್ ಮತ್ತು ಆಪಲ್ ಮಾರುಕಟ್ಟೆಯನ್ನು ಆವರಿಸಿಕೊಂಡುಬಿಟ್ಟಿದ್ದವು. ನೋಕಿಯಾ ಸಿಇಒ ಹೇಳಿದ ನಾವು ತಪ್ಪೇನೂ ಮಾಡಲಿಲ್ಲ ಎಂಬ ಮಾತು ತಾಂತ್ರಿಕವಾಗಿ ನಿಜವಿರಬಹುದು. ಅವರು ಗುಣಮಟ್ಟದ ಫೋನ್‌ಗಳನ್ನು ತಯಾರಿಸುವುದನ್ನು ನಿಲ್ಲಿಸಿರಲಿಲ್ಲ.

ಅವರು ತಮ್ಮ ಉದ್ಯೋಗಿಗಳಿಗೆ ಸಂಬಳ ಕೊಡುವುದನ್ನು ನಿಲ್ಲಿಸಿರಲಿಲ್ಲ. ಅವರು ತಮ್ಮ ಹಳೆಯ ಬಿಸಿನೆಸ್ ಪ್ಲಾನ್ ಅನ್ನು ಸರಿಯಾಗಿಯೇ ಪಾಲಿಸುತ್ತಿದ್ದರು. ಆದರೆ ಉದ್ಯಮದಲ್ಲಿ ಮತ್ತು ಜೀವನದಲ್ಲಿ, ಸರಿಯಾದದ್ದನ್ನೇ ಮಾಡುತ್ತಾ ಇರುವುದು ಕೂಡ ಕೆಲವೊಮ್ಮೆ ತಪ್ಪಾಗುತ್ತದೆ!

ಯಾವಾಗ ಅಂದ್ರೆ, ಆಟದ ನಿಯಮಗಳೇ ಬದಲಾದಾಗ,





ನೀವು ಹಳೆಯ ನಿಯಮದಂತೆ ಆಡುತ್ತಿದ್ದರೆ ನೀವು ಸೋಲುತ್ತೀರಿ. ನೋಕಿಯಾ ಮಾಡಿದ್ದು ಇದನ್ನೇ. ಅವರು ವರ್ತಮಾನದಲ್ಲಿ ಬದುಕುತ್ತಿದ್ದರು, ಆದರೆ ಜಗತ್ತು ಭವಿಷ್ಯದತ್ತ ಓಡುತ್ತಿತ್ತು. ಅವರು ಯಾವ ತಪ್ಪನ್ನೂ ಮಾಡಲಿಲ್ಲ, ಬದಲಿಗೆ ಏನೂ ಮಾಡದಿರುವುದೇ ಅವರ ದೊಡ್ಡ ತಪ್ಪಾಗಿತ್ತು.

ಯಾವುದೇ ವ್ಯಕ್ತಿ ಅಥವಾ ಸಂಸ್ಥೆ ಉನ್ನತ ಮಟ್ಟಕ್ಕೆ ಏರಿದಾಗ, ಅಲ್ಲಿ ಒಂದು ರೀತಿಯ ಆಲಸ್ಯ ಮತ್ತು ಅಹಂಕಾರ ಬರುತ್ತದೆ. ನಾವೇ ನಂಬರ್ ಒನ್, ನಮಗೆ ಯಾರೂ ಸಾಟಿಯಿಲ್ಲ, ನಾವು ಮಾಡಿದ್ದೇ ಸರಿ ಎಂಬ ಮನಸ್ಥಿತಿ ಬೆಳೆಯುತ್ತದೆ. ನೋಕಿಯಾ ಕೂಡ ಇದೇ ಭ್ರಮೆಯಲ್ಲಿತ್ತು. ತಮಗೆ ಎದುರಾಳಿಗಳೇ ಇಲ್ಲ ಎಂದು ಅವರು ಭಾವಿಸಿದ್ದರು.

ನಾವು ವಿಶ್ರಮಿಸುತ್ತಿರುವಾಗ, ನಮ್ಮ ಪ್ರತಿಸ್ಪರ್ಧಿ ಎಚ್ಚರವಾಗಿರುತ್ತಾನೆ, ಮೂಲೆಯಲ್ಲಿ ಕುಳಿತು ಹೊಸ ಆವಿಷ್ಕಾರ ಮಾಡುತ್ತಿರುತ್ತಾನೆ. ನಾವೀನ್ಯ ಎಂಬುದು ಭವಿಷ್ಯದ ಭಾಷೆ. ಯಾರು ಹೊಸದನ್ನು ಕಲಿಯುವುದಿಲ್ಲವೋ, ಯಾರು ಬದಲಾವಣೆಗೆ ತೆರೆದು ಕೊಳ್ಳುವುದಿಲ್ಲವೋ ಅವರು ಎಷ್ಟೇ ದೊಡ್ಡವರಾಗಿದ್ದರೂ ಕಾಲಗರ್ಭದಲ್ಲಿ ಕಣ್ಮರೆಯಾಗುತ್ತಾರೆ.

ನೋಕಿಯಾದ ಪತನ ಕೇವಲ ಬಿಸಿನೆಸ್ ಸ್ಟಡಿ ಮಾತ್ರವಲ್ಲ, ಇದು ನಮ್ಮ ವೈಯಕ್ತಿಕ ಜೀವನಕ್ಕೂ ಅನ್ವಯಿಸುವ ಪಾಠ. ನಾವು ಇಂದು ನಮ್ಮ ಕೆಲಸದಲ್ಲಿ ಎಷ್ಟೇ ನಿಪುಣರಾಗಿರಬಹುದು. ಆದರೆ ಐದು ವರ್ಷಗಳ ನಂತರ ನಮ್ಮ ಈಗಿನ ಕೌಶಲಗಳಿಗೆ ಬೆಲೆ ಇರುತ್ತದೆಯೇ? ಕೃತಕ ಬುದ್ಧಿಮತ್ತೆ (ಎಐ) ಮತ್ತು ತಂತ್ರಜ್ಞಾನ ಬೆಳೆಯುತ್ತಿರುವ ವೇಗ ನೋಡಿದರೆ, ನಾವು ಪ್ರತಿದಿನ ಹೊಸದನ್ನು ಕಲಿಯಲೇಬೇಕು.

ಇಲ್ಲದಿದ್ದರೆ ನಾವು ಉದ್ಯೋಗ ಮಾರುಕಟ್ಟೆಯಲ್ಲಿ ನೋಕಿಯಾದಂತೆ ಆಗುತ್ತೇವೆ. ಬದಲಾವಣೆ ಜಗದ ನಿಯಮ. ಹಳೆಯದಕ್ಕೇ ಜೋತುಬೀಳಬಾರದು. ಹೊಸ ತಂತ್ರನ, ಹೊಸ ಆಲೋಚನೆಗಳು ಮತ್ತು ಹೊಸ ಪದ್ಧತಿಗಳನ್ನು ಸ್ವಾಗತಿಸಬೇಕು. ನಾನು ಹೀಗೆಯೇ ಇರುವುದು ಎಂಬ ಹಠ ನಮ್ಮನ್ನು ಸೋಲಿಸುತ್ತದೆ.

ನಿನ್ನೆಯ ಗೆಲುವು ಇಂದಿಗೆ ಸಾಲದು. ನೀವು ಕಾಲೇಜಿನಲ್ಲಿ ಟಾಪರ್ ಆಗಿರಬಹುದು ಅಥವಾ ಕಳೆದ ವರ್ಷದ ಬೆಸ್ಟ್ ಎಂಪ್ಲಾಯ್ ಆಗಿರಬಹುದು. ಆದರೆ ಅದು ಇತಿಹಾಸ. ಜಗತ್ತು ನಿಮ್ಮಿಂದ ಈಗ ಮತ್ತು ಮುಂದೇನು ಎಂಬುದನ್ನು ನಿರೀಕ್ಷಿಸುತ್ತದೆ.

ಬದಲಾಗದಿದ್ದರೆ ಉಳಿಗಾಲವಿಲ್ಲ. ನೋಕಿಯಾದ ಕಥೆ ಒಂದು ದುರಂತವಲ್ಲ, ಅದೊಂದು ಎಚ್ಚರಿಕೆಯ ಗಂಟೆ. ಡೈನೋಸಾರ್‌ಗಳು ಅಳಿದುಹೋದವು, ಆದರೆ ಊಸರವಳ್ಳಿಗಳು ಉಳಿದುಕೊಂಡವು. ಯಾಕೆಂದರೆ, ಪರಿಸರಕ್ಕೆ ತಕ್ಕಂತೆ ಬಣ್ಣ ಬದಲಿಸುವ ಶಕ್ತಿ ಸರವಳ್ಳಿಗೆ ಇತ್ತು.

ಬಲಶಾಲಿಗಳು ಮಾತ್ರ ಉಳಿಯುವುದಿಲ್ಲ, ಬುದ್ಧಿವಂತರು ಮಾತ್ರ ಗೆಲ್ಲುವುದಿಲ್ಲ. ಯಾರು ಬದಲಾವಣೆಗೆ ವೇಗವಾಗಿ ಸ್ಪಂದಿಸುತ್ತಾರೋ ಅವರು ಮಾತ್ರ ಉಳಿಯುತ್ತಾರೆ ಎಂದು ಚಾರ್ಲ್ಸ್ ಡಾರ್ವಿನ್ ಹೇಳಿದ್ದು ಉದ್ಯಮಕ್ಕೂ ಮತ್ತು ಜೀವನಕ್ಕೂ ಸತ್ಯ.

ನೋಕಿಯಾ ಸಿಇಒ ಅವರ ಕಣ್ಣೀರ ಪ್ರಸಂಗ ನಮಗೆ ಹೇಳುವುದು ಇಷ್ಟೇ- ನೀವು ತಪ್ಪು ಮಾಡದಿದ್ದರೂ ಸೋಲಬಹುದು, ಆದರೆ ಹೊಸದನ್ನು ಕಲಿಯಲು ನಿಲ್ಲಿಸಿದರೆ ಖಂಡಿತವಾಗಿಯೂ ಸೋಲುತ್ತೀರಿ.

ಆದ್ದರಿಂದ, ಕಲಿಯುತ್ತಿರಿ, ಬದಲಾಗುತ್ತಿರಿ ಮತ್ತು ಬೆಳೆಯುತ್ತಿರಿ. ಏಕೆಂದರೆ, ನಿಂತ ನೀರು ಕೊಳೆಯುತ್ತದೆ, ಹರಿಯುವ ನೀರು ಮಾತ್ರ ಶುದ್ಧವಾಗಿರುತ್ತದೆ.

**- ವಿಶ್ವೇಶ್ವರ ಭಟ್**

# ಫ್ಯಾಂಟಮ್ ವೈಬ್ರೇಶನ್ ಸಿಂಡ್ರೋಮ್

**■ ಜೇಬಿನಲ್ಲಿ ಫೋನ್ ಇಲ್ಲದಿದ್ದರೂ ಅಥವಾ ಫೋನ್ ಸೈಲೆಂಟ್ ಆಗಿದ್ದರೂ ಅದು ವೈಬ್ರೇಟ್ ಆಗುತ್ತಿರಬಹುದು ಎಂಬ ಭ್ರಮೆ ನಮಗಾಗುತ್ತದೆ. ವೈದ್ಯಕೀಯ ಮತ್ತು ಮಾನಸಿಕ ಜಗತ್ತಿನಲ್ಲಿ ಇದನ್ನು ಫ್ಯಾಂಟಮ್ ವೈಬ್ರೇಶನ್ ಸಿಂಡ್ರೋಮ್ ಅಥವಾ ರಿಂಗ್ಸೋಕ್ಸಿಯಾ ಎಂದು ಕರೆಯಲಾಗುತ್ತದೆ.**

ಸಂಪಾದಕರ ಸದ್ಯಶೋಧನೆ

ಇಂದಿನ ತಾಂತ್ರಿಕ ಯುಗದಲ್ಲಿ ಮನುಷ್ಯ ಮತ್ತು ಮೊಬೈಲ್ ಫೋನ್ ನಡುವಿನ ಸಂಬಂಧ ಎಷ್ಟು ಗಾಢವಾಗಿದೆಯೆಂದರೆ, ಫೋನ್ ಇಲ್ಲದೇ ಒಂದು ಕ್ಷಣವೂ ಇರಲು ಸಾಧ್ಯವಿಲ್ಲ ಎಂಬಂತಾಗಿದೆ. ಈ ಅತಿಯಾದ ಅವಲಂಬನೆಯು ನಮ್ಮ ಮನಸ್ಸಿನ ಮೇಲೆ ಎಂಥ ಪರಿಣಾಮ ಬೀರಿದೆ ಎಂದರೆ, ಜೇಬಿನಲ್ಲಿ ಫೋನ್ ಇಲ್ಲದಿದ್ದರೂ ಅಥವಾ ಫೋನ್ ಸೈಲೆಂಟ್ ಆಗಿದ್ದರೂ ಅದು ವೈಬ್ರೇಟ್ ಆಗುತ್ತಿರಬಹುದು ಎಂಬ ಭ್ರಮೆ ನಮಗಾಗುತ್ತದೆ.

ವೈದ್ಯಕೀಯ ಮತ್ತು ಮಾನಸಿಕ ಜಗತ್ತಿನಲ್ಲಿ ಇದನ್ನು ಫ್ಯಾಂಟಮ್ ವೈಬ್ರೇಶನ್ ಸಿಂಡ್ರೋಮ್ ಅಥವಾ ರಿಂಗ್ಸೋಕ್ಸಿಯಾ ಎಂದು ಕರೆಯಲಾಗುತ್ತದೆ. ಏನಿದು ಫ್ಯಾಂಟಮ್ ವೈಬ್ರೇಶನ್ ಸಿಂಡ್ರೋಮ್? ಫ್ಯಾಂಟಮ್ ಎಂದರೆ ಭ್ರಮೆ ಅಥವಾ ಇಲ್ಲದಿರುವುದು ಎಂದರ್ಥ.

ನಮ್ಮ ಜೇಬಿನಲ್ಲಿ ಅಥವಾ ಕೈಯಲ್ಲಿರುವ ಮೊಬೈಲ್ ಫೋನ್ ಯಾವುದೇ ನೋಟಿಫಿಕೇಶನ್ ಅಥವಾ ಕರೆ ಬರದಿದ್ದರೂ ವೈಬ್ರೇಟ್ ಆದಂತೆ ಭಾಸವಾಗುವುದೇ ಈ ಸಿಂಡ್ರೋಮ್. ಸಂಶೋಧನೆಗಳ ಪ್ರಕಾರ, ಶೇ.90 ರಷ್ಟು ಮೊಬೈಲ್ ಬಳಕೆದಾರರು ತಮ್ಮ ಜೀವನದಲ್ಲಿ ಒಮ್ಮೆಯಾದರೂ ಈ ಅನುಭವವನ್ನು ಪಡೆದಿರುತ್ತಾರೆ. ಇದು ಕೇವಲ ದೈಹಿಕ ಸ್ಪರ್ಶಕ್ಕೆ ಸಂಬಂಧಿಸಿದ್ದಲ್ಲ, ಬದಲಾಗಿ ನಮ್ಮ ಮಿದುಳು ನೀಡುವ ಒಂದು ತಪ್ಪು ಸಂದೇಶ.

ನಮ್ಮ ಚರ್ಮವು ಅತಿ ಸೂಕ್ಷ್ಮವಾದ ಸಂವೇದಕಗಳನ್ನು ಹೊಂದಿದೆ. ಮೊಬೈಲ್ ಅನ್ನು ದೀರ್ಘಕಾಲದವರೆಗೆ ಜೇಬಿನಲ್ಲಿ ಇಟ್ಟುಕೊಳ್ಳುವುದರಿಂದ ಅಥವಾ ಸದಾ ಕೈಯಲ್ಲಿ ಹಿಡಿಯುವುದರಿಂದ, ನಮ್ಮ ಮಿದುಳು ಆ ಭಾಗದ ಸಣ್ಣ ಚಲನೆಯನ್ನೂ ಫೋನ್‌ನ ವೈಬ್ರೇಶನ್ ಎಂದು ಅರ್ಥೈಸಿಕೊಳ್ಳಲು ಅಭ್ಯಾಸ ಮಾಡಿಕೊಂಡಿರುತ್ತದೆ.

ಬಟ್ಟೆಯ ಘರ್ಷಣೆ, ಸ್ನಾಯುಗಳ ಸಣ್ಣ ಸೆಳೆತ ಅಥವಾ ಚರ್ಮದ ತುರಿಕೆಯನ್ನು ಮಿದುಳು ಫೋನ್ ವೈಬ್ರೇಶನ್ ಎಂದು ತಪ್ಪು ಗ್ರಹಿಕೆ ಮಾಡುತ್ತದೆ. ನಾವು ಯಾವಾಗಲೂ ಯಾರದೋ ಕರೆ ಅಥವಾ ಮೆಸೇಜ್ ನಿರೀಕ್ಷೆಯಲ್ಲಿದ್ದಾಗ (ಉದಾಹರಣೆಗೆ ಕೆಲಸದ ಒತ್ತಡ ಅಥವಾ ಪ್ರೇಮ ಪ್ರಕರಣಗಳಲ್ಲಿ), ಮಿದುಳು ಅತೀವ ಜಾಗರೂಕತೆಯಿಂದ ಇರುತ್ತದೆ. ಈ ಜಾಗರೂಕತೆ ಎಷ್ಟು ಹೆಚ್ಚಾಗುತ್ತದೆ ಎಂದರೆ, ಏನೂ ನಡೆಯದಿದ್ದರೂ ಏನೋ ಸಂಭವಿಸಿದೆ ಎಂಬ ಭ್ರಮೆಯನ್ನು ಸೃಷ್ಟಿಸುತ್ತದೆ.

ಈ ಸಿಂಡ್ರೋಮ್‌ಗೆ ಕಾರಣಗಳೇನು? ಮೊದಲನೆಯದು, ಅತಿಯಾದ ಫೋನ್ ಬಳಕೆ. ದಿನದ ಹೆಚ್ಚಿನ ಸಮಯವನ್ನು ಸ್ಮಾರ್ಟ್‌ಫೋನ್ ಜತೆ ಕಳೆಯುವವರಲ್ಲಿ ಇದು ಅತಿ ಹೆಚ್ಚು. ಎರಡನೆಯದು, ಮಾನಸಿಕ ಒತ್ತಡ ಮತ್ತು ಆತಂಕ. ಜೀವನದಲ್ಲಿ ತೀವ್ರ ಒತ್ತಡ ಇರುವವರು ಅಥವಾ ಭಾವನಾತ್ಮಕವಾಗಿ ಅಸ್ಥಿರವಾಗಿರುವವರು ನೋಟಿಫಿಕೇಶನ್‌ಗಳಿಗಾಗಿ ಸದಾ ಹಂಬಲಿಸುತ್ತಿರುತ್ತಾರೆ. ಈ ನೋಟಿಫಿಕೇಶನ್ ಹಸಿವು ಭ್ರಮೆಗೆ ದಾರಿಯಾಗುತ್ತದೆ.

ಮೂರನೆಯದು, ಸೈಕಲಾಜಿಕಲ್ ಸಂಗತಿ. ಸಮಾಜದಲ್ಲಿ ನಾವು ಎಷ್ಟು ಆಕ್ಟಿವ್ ಆಗಿದ್ದೇವೆ ಎಂದು ತೋರಿಸಿಕೊಳ್ಳುವ ಹಪಾಹಪಿ ನಮ್ಮನ್ನು ಸದಾ ಫೋನ್ ಚೆಕ್ ಮಾಡುವಂತೆ ಪ್ರೇರೇಪಿಸುತ್ತದೆ. ನರಮಂಡಲದ ಹಸ್ತಕ್ಷೇಪ.


ನರಗಳ ಸಣ್ಣ ಸಂವೇದನೆಯನ್ನು, ಮಿದುಳು ಡಿಜಿಟಲ್ ಸಿಗ್ನಲ್‌ಗಳಾಗಿ ಪರಿವರ್ತಿಸಿ ಅರ್ಥೈಸಿಕೊಳ್ಳುವುದು. ಇದರ ಲಕ್ಷಣಗಳು ಹೇಗಿರುತ್ತವೆ? ಜೇಬಿನಲ್ಲಿ ಏನೋ ಚಲಿಸಿದಂತಾಗುವುದು ಅಥವಾ ನಡುಗಿದಂತಾಗುವುದು, ಫೋನ್ ತೆಗೆದು ನೋಡಿದಾಗ ಅಲ್ಲಿ ಯಾವುದೇ ಕರೆ ಅಥವಾ ಮೆಸೇಜ್ ಇರುವುದಿಲ್ಲ, ಫೋನ್ ಮನೆಯ ಬೇರೆ ರೂಮ್‌ನಲ್ಲಿದ್ದರೂ ಜೇಬಿನಲ್ಲಿ ವೈಬ್ರೇಶನ್ ಆದಂತೆ ಅನಿಸುವುದು, ಸ್ನಾಯುಗಳಲ್ಲಿ ಸೆಳೆತ ಉಂಟಾದಾಗ ಅದು ಫೋನ್‌ನಿಂದಲೇ ಬಂದದ್ದು ಎಂದು ನಂಬುವುದು.

ಹಾಗಾದರೆ ಇದು ಅಪಾಯಕಾರಿಯೇ? ಸಾಮಾನ್ಯವಾಗಿ ಇದು ದೊಡ್ಡ ದೈಹಿಕ ಕಾಯಿಲೆಯಲ್ಲ. ಆದರೆ, ಇದು ನಮ್ಮ ಮಾನಸಿಕ ಆರೋಗ್ಯ ಹದಗೆಡುತ್ತಿರುವುದರ ಸಂಕೇತ. ಸದಾ ಫೋನ್ ಬಗ್ಗೆ ಯೋಚಿಸುವುದರಿಂದ ಮಾಡುವ ಕೆಲಸದ ಮೇಲೆ ಗಮನ ಇರುವುದಿಲ್ಲ.

ರಾತ್ರಿಯಿಡೀ ಫೋನ್ ವೈಬ್ರೇಟ್ ಆಗುತ್ತಿದೆಯೇ ಎಂದು ಚೆಕ್ ಮಾಡುವುದರಿಂದ ನಿದ್ರೆಯ ಗುಣಮಟ್ಟ ಕಡಿಮೆಯಾಗುತ್ತದೆ. ಒಂದು ವೇಳೆ ಫೋನ್ ವೈಬ್ರೇಟ್ ಆಗದಿದ್ದರೆ ನನಗೆ ಯಾರೂ ಮೆಸೇಜ್ ಮಾಡುತ್ತಿಲ್ಲವಲ್ಲ? ಎಂಬ ಕೀಳರಿಮೆ ಕಾಡಬಹುದು. ಈ ಸಿಂಡ್ರೋಮ್ ಅನ್ನು ತಡೆಗಟ್ಟಲು ನಾವೇ ಕೆಲವು ನಿಯಮಗಳನ್ನು ರೂಪಿಸಿಕೊಳ್ಳಬೇಕು.

ಫೋನ್ ಬಳಸುವ ಜಾಗ ಬದಲಿಸಬೇಕು. ನೀವು ಯಾವಾಗಲೂ ಬಲ ಜೇಬಿನಲ್ಲಿ ಫೋನ್ ಇಡುತ್ತಿದ್ದರೆ, ಕೆಲವು ದಿನಗಳ ಕಾಲ ಎಡ ಜೇಬಿನಲ್ಲಿ ಇಡಿ ಅಥವಾ ಬ್ಯಾಗ್‌ನಲ್ಲಿ ಇಡಿ. ಇದು ಮಿದುಳಿನ ಹಳೆಯ ಅಭ್ಯಾಸವನ್ನು ಮುರಿಯುತ್ತದೆ. ಇನ್ನೊಂದು ಅಂಶ ಅಂದ್ರೆ, ವೈಬ್ರೇಶನ್ ಮೋಡ್ ಆಫ್ ಮಾಡಿ.

ಫೋನ್ ಅನ್ನು ರಿಂಗಿಂಗ್ ಮೋಡ್ ಅಥವಾ ಸಂಪೂರ್ಣ ಸೈಲೆಂಟ್ ಮೋಡ್‌ನಲ್ಲಿ ಇಡಿ. ವೈಬ್ರೇಶನ್ ಮೋಡ್‌ನಿಂದಲೇ ಈ ಸಮಸ್ಯೆ ಹುಟ್ಟಿಕೊಳ್ಳುವುದು. ವಾರದಲ್ಲಿ ಒಂದು ದಿನ ಅಥವಾ ದಿನದಲ್ಲಿ ಕೆಲವು ಗಂಟೆಗಳ ಕಾಲ ಫೋನ್ ಅನ್ನು ಸಂಪೂರ್ಣವಾಗಿ ಸ್ವಿಚ್ ಆಫ್ ಮಾಡಿ ದೂರವಿಡುವುದು ವಾಸಿ.



# ದುಡ್ಡು ಮಾಡೋದೇ ದಂಧೆ: ಸತ್ಯವಂತರಿಗಿಲ್ಲಿ ಜಾಗವಿಲ್ಲ

ಸದಾಶಯ

ಸರಕಾರಿ ಶಾಲೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಕಾನ್ವೆಂಟುಗಳು ಹಳ್ಳಿಗಳಲ್ಲೂ ತಲೆಯೆತ್ತಿವೆ. ಇದರ ಹಿಂದಿರುವುದು, ಮಕ್ಕಳು ವಿದ್ಯಾವಂತರಾಗಬೇಕು, ದೇಶಕ್ಕೆ ಸತ್ಪ್ರಜೆಗಳ ಕೊಡುಗೆ ಸಿಗಬೇಕು ಎಂಬ ಆಶಯವಲ್ಲ; ಬದಲಿಗೆ ಶಿಕ್ಷಣದ ಹೆಸರಿನಲ್ಲಿ ಗಂಟು ಮಾಡಿಕೊಳ್ಳುವ ಉದ್ದೇಶ.

ಬದುಕೆಂದರೆ ಹೋರಾಟವೇ ಹೌದು. ಹೋರಾಡದ ಜೀವನವಿಲ್ಲ. ಕೆಲವರಿಗೆ ಹೋರಾಟವೇ ಬದುಕಾಗಿದೆ. ಹುಟ್ಟಿದ ಮಗುವಿನಿಂದ ಮೊದಲ್ಗೊಂಡು, ಮರಣದ ಬಾಗಿಲಲ್ಲಿ ನಿಂತಿರು ವಾತನವರೆಗೂ ಹೋರಾಟ ಮಾಡಲೇಬೇಕು. ಧೈರ್ಯದಿಂದ ಮುನ್ನುಗ್ಗಿ ಹೋರಾಡಿದವನು ಯಶಸ್ಸನ್ನು ಕಾಣುತ್ತಾನೆ.

ಏನಪ್ಪಾ ಮಾಡೋದು? ಎಂದು ತಲೆಯ ಮೇಲೆ ಕೈಹೊತ್ತು ಕುಳಿತರೆ ಆತ ಏನನ್ನೂ ದಕ್ಕಿಸಿಕೊಳ್ಳಲಾರ. ಜೀವಸಂಕುಲಗಳು ಬದುಕಿರುವುದೇ ಹೋರಾಟದ ಕೆಚ್ಚಿನಿಂದ, ಒಂದು ಮತ್ತೊಂದನ್ನು ಕೊಂದು ಬದುಕುವುದೇ ಇಲ್ಲಿ ನಿಯಮವಾಗಿಬಿಟ್ಟಿದೆ. ಒಬ್ಬ ಮನುಷ್ಯನು ಮತ್ತೊಬ್ಬನನ್ನು ಕೊಂದು ಬದುಕುವುದನ್ನು ನಿಯಮವು ಸಮರ್ಥಿಸುವುದಿಲ್ಲವಾದರೂ, ಸ್ವಾರ್ಥಕ್ಕಾಗಿ ಒಬ್ಬರು ಮತ್ತೊಬ್ಬರನ್ನು ತುಳಿದು ನಡೆಯುವುದನ್ನು ಕಾಣುತ್ತಿದ್ದೇವೆ.

ನಡೆ ಮುಂದೆ, ನಡೆ ಮುಂದೆ ನುಗ್ಗಿ ನಡೆ ಮುಂದೆ, ಜಗ್ಗದೆಯೆ ಕುಗ್ಗದೆಯೆ ಹಿಗ್ಗಿ ನಡೆ ಮುಂದೆ ಎನ್ನುತ್ತದೆ ಕುವೆಂಪು ಅವರ ಕವನದ ಸಾಲೊಂದು. ಆದರೆ ನಮ್ಮಲ್ಲಿ ಬಹುತೇಕರು, ಇನ್ನೊಬ್ಬರನ್ನು ತುಳಿದು ಮುಂದೆ ನಡೆ ಎಂಬ ಧೋರಣೆಯನ್ನು ರೂಢಿಸಿಕೊಂಡಿರುವಂತಿದೆ!

ಭಂಡತನವೇ ಬದುಕಿನ ಸೂತ್ರವಾಗಿ ಬಿಟ್ಟಿದೆ. ಕೆಲವರನ್ನು ಹೊರತುಪಡಿಸಿ, ಕೋಟಿ ಕೋಟಿಗೆ ಬಾಳುವ ಕುಳಗಳ ಹಿನ್ನೆಲೆಯನ್ನು ಒಮ್ಮೆ ಕೆದಕಿ ನೋಡಿದರೆ, ಅವರು ಅಡ್ಡ ದಾರಿಯ ಮೂಲಕ ಮೇಲೆ ಬಂದವರೋ ಅಥವಾ ದಾರಿಯಲ್ಲಿ ಅಡ್ಡ ಸಿಕ್ಕವರನ್ನು ಬಡಿದು ಬಂದವರೋ ಆಗಿರುತ್ತಾರೆ ಎಂಬುದು ವಿಪರ್ಯಾಸ. ಬೆಳಗ್ಗೆಯಿಂದ ಸಂಜೆಯವರೆಗೂ ಮೈಮುರಿದು ದುಡಿಯುವ ಶ್ರಮಜೀವಿಗೆ, ತನ್ನ ಕೆಲಸದಲ್ಲಿ ತೋರಬೇಕಾದ ನಿಷ್ಠೆ ಮತ್ತು ಅದಕ್ಕೆ ತಕ್ಕ ಪ್ರತಿಫಲ ಇಷ್ಟು ಮಾತ್ರವೇ ನಿರೀಕ್ಷೆಯಾಗಿರುತ್ತದೆ. ಈತ ಶ್ರೀಮಂತ ಆಗುವುದಾದರೂ ಹೇಗೆ?! ಆದರೆ ಆತನಿಗಿರುವ ನೆಮ್ಮದಿಯು ಕಂತೆಗಟ್ಟಲೆ ಹಣ ಸಂಪಾದಿಸುವವರಿಗೂ ಕೆಲವೊಮ್ಮೆ ಸಿಗುವುದಿಲ್ಲ.

ಶಾಲಾ ಶಿಕ್ಷಣದಿಂದ ಪ್ರಾರಂಭವಾಗಿ, ಬದುಕನ್ನು ಕಟ್ಟಿಕೊಡುವ ಕಾರ್ಯಕ್ಷೇತ್ರದವರೆಗೂ ಅವರಿವರನ್ನು ತುಳಿದು ಬದುಕುವುದೇ ಬಹುತೇಕರ ಆಟವಾಗಿಬಿಟ್ಟಿದೆ. ಹೀಗೆ ಮಾಡಿದರೆ ಮಾತ್ರವೇ ಸಿರಿವಂತರಾಗಲು ಸಾಧ್ಯ ಎಂಬ ಧೋರಣೆಯೂ ಇದಕ್ಕೆ ಕಾರಣವಿದ್ದಿರಬಹುದು. ನಮ್ಮ ರಾಜಕೀಯ ಕ್ಷೇತ್ರವನ್ನೇ ತೆಗೆದುಕೊಳ್ಳಿ- ಇಲ್ಲಿ ಇಂದು ಆಪ್ತರಾಗಿದ್ದವರು ನಾಳೆ ವೈರಿಗಳು; ಅಧಿಕಾರ ಪಡೆಯುವುದಕ್ಕೆ ವೈರಿಯೂ ಆಪ್ತನಾಗುತ್ತಾನೆ, ಅದನ್ನು ದಕ್ಕಿಸಿ ಕೊಂಡವನು ನಂತರದಲ್ಲಿ, ಸಹಾಯ ಮಾಡಿದವನನ್ನೂ ತುಳಿದೇ ಮರೆಯುತ್ತಾನೆ!

ಸ್ಪರ್ಧೆಯಲ್ಲಿ ಶತಾಯಗತಾಯ ಗೆಲ್ಲಲೇಬೇಕು ಎಂಬ ಹವಣಿಕೆಯಲ್ಲಿ ಮೋಸ ಮಾಡುವುದು ಈಗ ಸ್ವೀಕೃತ ಗುಣವಾಗಿ ಬಿಟ್ಟಿದೆ. ಕಾರಣ, ಇಂಥ ಆಸೆಯನ್ನು ಮಕ್ಕಳಲ್ಲೇ ಕೆಲವರು ಬಿತ್ತುವುದಿದೆ. ಕಾನ್ವೆಂಟ್ ಸಂಸ್ಕೃತಿ ಬಂದ ಮೇಲೆ ಇದು ಕೊಂಚ ವ್ಯಾಪಕವಾಗಿದೆ ಎನ್ನಬೇಕು.

ಮೊದಲ ಹೆಜ್ಜೆಯಾಗಿ, ನನ್ನ ಮಗ ಪ್ರತಿಷ್ಠಿತ ಇಂಗ್ಲಿಷ್ ಕಾನ್ವೆಂಟ್‌ನಲ್ಲೇ ಓದಬೇಕು, ಅವನ ಓದಿಗಾಗಿ ಎಷ್ಟೇ ಹಣ ಖರ್ಚಾದರೂ ಸಂಪಾದಿಸಿ ತರುವೆ; ಆತ ಪ್ರತಿ ಹಂತದಲ್ಲೂ ರ‍್ಯಾಂಕ್ ಪಡೆದೇ ಪಾಸಾಗಬೇಕು ಎನ್ನುವ ಧೋರಣೆ ಸಾಕಷ್ಟು ಪೋಷಕರಲ್ಲಿರುತ್ತದೆ. ಮಕ್ಕಳ ಬೆಳವಣಿಗೆಯ ದೃಷ್ಟಿಯಲ್ಲಿ ಇಂಥದೊಂದು ಆಶಯ ಸಹಜವೇ ಇದ್ದಿರಬಹುದು. ಆದರೆ ಬೇರೆಯವರ ಮಕ್ಕಳೊಂದಿಗೆ ಈ ಸ್ಥಿತಿಗತಿಯನ್ನು ತುಲನೆ ಮಾಡಿ ಆನಂದಿಸುವುದು ಸರಿಯೇ? ಸರಕಾರಿ ಶಾಲಾ-ಕಾಲೇಜುಗಳಲ್ಲಿ ಕಡಿಮೆ ಖರ್ಚಿನಲ್ಲಿ ವಿದ್ಯೆ ಸಿಗುತ್ತಿದ್ದರೂ, ಆದಾಯ ಮೀರಿ ಖರ್ಚುಮಾಡಿ ಖಾಸಗಿ ಶಾಲೆಯಲ್ಲಿ ಮಕ್ಕಳನ್ನು ಓದಿಸಲು ಮುಂದಾಗುವವರು, ಆ ಹೆಚ್ಚುವರಿ ಹಣಕ್ಕಾಗಿ ಅನ್ಯ ಅಥವಾ ವಾಮ ಮಾರ್ಗವನ್ನು ಆಯ್ಕೆ ಮಾಡಿ ಕೊಳ್ಳದೇ ಇರುವರೇ? ಇಂಥ ಮಾರ್ಗಗಳಲ್ಲಿ ಮತ್ತೊಬ್ಬರನ್ನು ತುಳಿದು ಸಂಪಾದಿಸುವುದೂ ಸೇರಿರುತ್ತದೆಯಲ್ಲವೇ? ಸರಕಾರಿ ಶಾಲೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಕಾನ್ವೆಂಟುಗಳು ಹಳ್ಳಿ ಗಳಲ್ಲೂ ತಲೆಯೆತ್ತಿವೆ.

ಇದರ ಹಿಂದಿರುವುದು, ಮಕ್ಕಳು ವಿದ್ಯಾವಂತರಾಗಬೇಕು, ದೇಶಕ್ಕೆ ಸತ್ಪ್ರಜೆಗಳ ಕೊಡುಗೆ ಸಿಗಬೇಕು ಎಂಬ ಆಶಯವಲ್ಲ; ಬದಲಿಗೆ ಶಿಕ್ಷಣದ ಹೆಸರಿನಲ್ಲಿ ಗಂಟು ಮಾಡಿಕೊಳ್ಳುವ ಉದ್ದೇಶ. ಇದಕ್ಕಾಗಿ ಇವರು ತುಳಿಯುವುದು ಒಬ್ಬಿಬ್ಬರನ್ನಲ್ಲ, ಇಡೀ ಸಮುದಾಯನ್ನು. ಇವರಿಗೆ ಹಣ ನೀಡುವುದಕ್ಕೆ ಪೋಷಕರಿಗೂ ದಾರಿ ಬೇಕಲ್ಲ? ದಕ್ಕುವ ಸರಕಾರಿ ಸಂಬಳವು ಡೊನೇಷನ್ ಕೊಟ್ಟು ಓದಿಸುವುದಕ್ಕೆ ಸಾಲುತ್ತದೆಯೇ? ಇಲ್ಲ.

ಹೀಗಾಗಿ ಹೆಚ್ಚಿನ ಸಂಪಾದನೆಗಾಗಿ ಕೈಚಾಚುವುದು ಅವರಿಗೆ ಅನಿವಾರ್ಯವಾಗುತ್ತದೆ. ಆದರೆ ನಮ್ಮ ರೈತರ ಪಾಡನ್ನು ಕೇಳುವವರು ಯಾರು? ಅವರಿಗೆ ಲಂಚ ಎಲ್ಲಿಂದ ಬರಬೇಕು? ಇರುವ ಜಮೀನಿನಿಂದ ಬರುವ ಅಲ್ಪಸ್ವಲ್ಪ ಬೆಳೆಯನ್ನು ಮಾರಾಟ ಮಾಡಿಯೇ ಅವರು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಬೇಕು. ಈ ದುರವಸ್ಥೆ ಯಾರ ಗಮನಕ್ಕೂ ಬರುತ್ತಿಲ್ಲವೇಕೆ? ಇತ್ತೀಚಿನ ದಿನಗಳಲ್ಲಿ, ಇಂಗ್ಲಿಷ್ ಕಾನ್ವೆಂಟ್‌ಗಳಂತೆ ನಗರದ ಬೀದಿ ಬೀದಿಗಳಲ್ಲಿ ಹಾಗೂ ಸಣ್ಣ ಪುಟ್ಟ ಊರುಗಳಲ್ಲೂ ಲೆಕ್ಕವಿಲ್ಲದಷ್ಟು ನರ್ಸಿಂಗ್ ಹೋಮ್‌ಗಳು ಹುಟ್ಟಿಕೊಂಡಿವೆ.

ಇವು ಹಣ ಮಾಡುವ ಕೇಂದ್ರಗಳೇ ಆಗಿಬಿಟ್ಟಿರುವುದನ್ನು ಹೊಸದಾಗಿ ಹೇಳಬೇಕಿಲ್ಲ. ನಾಲ್ಕು ದಶಕಗಳ ಹಿಂದೆ ಇಂಥ ಚಿತ್ರಣವಿರಲಿಲ್ಲ. ಆಗೆಲ್ಲಾ, ಸರಕಾರಿ ಆಸ್ಪತ್ರೆಗಳಲ್ಲಿ ಗಾಜಿನ ಹೂಜಿಗಳಲ್ಲಿ ತುಂಬಿಸಿಟ್ಟು ಉಚಿತವಾಗಿ ಕೊಡುತ್ತಿದ್ದ ಬಣ್ಣ ಬಣ್ಣದ ಕಹಿ ಔಷಧಿ ಮತ್ತು ಮಾತ್ರೆಗಳೇ ರೋಗಿಗಳನ್ನು ಕಾಪಾಡುತ್ತಿದ್ದವು.

ಕೆಮ್ಮಿದ್ದಕ್ಕೆ, ಕ್ಯಾಕರಿಸಿದ್ದಕ್ಕೆಲ್ಲಾ ಲ್ಯಾಬ್‌ಗಳಲ್ಲಿ ಪರೀಕ್ಷೆ ಮಾಡಿಸುವ ಗೋಜಿರಲಿಲ್ಲ. ಹಳ್ಳಿನ ಡಾಕ್ಟರ್‌ಗಳು ಇದ್ದುದೇ ಅಪರೂಪ ಎನ್ನಬಹುದು! ಕಾಯಿಲೆ ಯಾವುದೇ ಆಗಿರಲಿ, ನೋಡುವ ವೈದ್ಯರು ಇದ್ದುದು ಒಬ್ಬರೇ. ಈಗ ಬಿಡಿ, ಪ್ರತಿ ಅಂಗಾಂಗಕ್ಕೂ ಒಬ್ಬೊಬ್ಬ ಸ್ಪೆಷಲಿಸ್ಟ್ ಹುಟ್ಟಿಕೊಂಡಿದ್ದಾರೆ. ರೋಗಿಯನ್ನು ಪರೀಕ್ಷಿಸುತ್ತಿದ್ದಂತೆ ಅವರು ಹೇಳಿ ಬಿಡುತ್ತಾರೆ- ಇದು ನನ್ನ ವ್ಯಾಪ್ತಿಗೆ ಬರುವುದಿಲ್ಲ, ಅವರಿಗೆ ಬರುತ್ತೆ. ಅವರಲ್ಲಿಗೆ ಹೋಗಿ ಅಂತ!

> ಏನಪ್ಪಾ ಮಾಡೋದು? ಎಂದು ತಲೆಯ ಮೇಲೆ ಕೈಹೊತ್ತು ಕುಳಿತರೆ ಆತ ಏನನ್ನೂ ದಕ್ಕಿಸಿ ಕೊಳ್ಳಲಾರ. ಜೀವಸಂಕುಲಗಳು ಬದುಕಿರುವುದೇ ಹೋರಾಟದ ಕೆಚ್ಚಿನಿಂದ, ಒಂದು ಮತ್ತೊಂದನ್ನು ಕೊಂದು ಬದುಕುವುದೇ ಇಲ್ಲಿ ನಿಯಮವಾಗಿ ಬಿಟ್ಟಿದೆ. ಒಬ್ಬ ಮನುಷ್ಯನು ಮತ್ತೊಬ್ಬನನ್ನು ಕೊಂದು ಬದುಕುವುದನ್ನು ನಿಯಮವು ಸಮರ್ಥಿಸುವುದಿಲ್ಲವಾದರೂ, ಸ್ವಾರ್ಥಕ್ಕಾಗಿ ಒಬ್ಬರು ಮತ್ತೊಬ್ಬರನ್ನು ತುಳಿದು ನಡೆಯುವುದನ್ನು ಕಾಣುತ್ತಿದ್ದೇವೆ.

ಸರಕಾರಗಳು ಉಚಿತವಾಗಿ ಕೊಡಬೇಕಾಗಿರುವುದು ಶಿಕ್ಷಣ ಮತ್ತು ಆರೋಗ್ಯವನ್ನು. ಇವೆರಡನ್ನು ಬಿಟ್ಟು ಉಳಿದೆಲ್ಲವನ್ನೂ ಉಚಿತವಾಗಿ ಕೊಟ್ಟರೂ ಪ್ರಯೋಜನವಿಲ್ಲ. ಹಸಿದವರಿಗೆ ಅನ್ನಭಾಗ್ಯ ಬೇಕು ನಿಜ; ಆದರೆ ಹೊಟ್ಟೆತುಂಬಾ ಉಂಡುಬಿಟ್ಟರೆ ಸಾಕೇ? ಆರೋಗ್ಯ ಮತ್ತು ಮಕ್ಕಳಿಗೆ ಒಳ್ಳೆಯ ಶಿಕ್ಷಣ ಬೇಡವೇ? ದುಡಿಮೆ ಎಂಬುದು ಬದುಕಿನಲ್ಲಿ ಮೃಷ್ಟಾನ್ನವನ್ನು ತಿನ್ನುವಷ್ಟು ಶಕ್ತಿಯನ್ನು ದಕ್ಕಿಸಿ ಕೊಡುವಂತಿರಬೇಕು; ಆದರೆ ಇಂದಿನ ವ್ಯವಸ್ಥೆಯಲ್ಲಿ ಮನೆಮಂದಿಯೆಲ್ಲಾ ಹಗಲಿರುಳು ದುಡಿದರೂ ಶಿಕ್ಷಣ ಮತ್ತು ಆರೋಗ್ಯ ರಕ್ಷಣೆಗೆ ಹಣವನ್ನು ಹೊಂಚಲಾಗದು ಎಂಬ ಪರಿಸ್ಥಿತಿ ಇದೆ. ನ್ಯಾಯಯುತ ದುಡಿಮೆಯಿಂದ ಸಂಪಾದಿಸಿದ್ದು ಈ ಬಾಬತ್ತುಗಳಿಗೆ ಸಾಲದೆ ಹೋಗುವುದರಿಂದ, ವಾಮಮಾರ್ಗದ ಸಂಪಾದನೆಗೆ ಪ್ರಚೋದನೆಯಾಗುವುದರಲ್ಲಿ ಅಚ್ಚರಿಯೇನಿಲ್ಲ. ಶಿಕ್ಷಣ ಮತ್ತು ಆರೋಗ್ಯ ಎಂಬೆರಡು ಸೌಕರ್ಯಗಳು ಪೂರ್ಣ ಪ್ರಮಾಣದಲ್ಲಿ ಉಚಿತವಾದರೆ ಸಮಾಜವು ನೆಮ್ಮದಿಯನ್ನು ಕಾಣಬಲ್ಲದು; ಇಲ್ಲವಾದಲ್ಲಿ ಹೆಚ್ಚಿನ ಸಂಪಾದನೆಗೆ ಮತ್ತೊಬ್ಬರ ತಲೆಯ ಮೇಲೆ ಕೈ ಇಡುವುದು ಅನಿವಾರ್ಯವಾಗುತ್ತದೆ.

ಜನರು ಊಟ ಮತ್ತು ಬಟ್ಟೆಯನ್ನು ಹೇಗಾದರೂ ಸಂಪಾದಿಸಿಕೊಳ್ಳುತ್ತಾರೆ; ಆದರೆ ಸಣ್ಣ ಪುಟ್ಟ ಕಾಯಿಲೆ ಬಂದರೂ ಅದಕ್ಕೆ ತಗಲುವ ವೆಚ್ಚವನ್ನು ಅವರು ಭರಿಸಲಾರರು. ಇನ್ನು ದೊಡ್ಡ ಕಾಯಿಲೆಗಳು ಅಟಕಾಯಿಸಿಕೊಂಡರಂತೂ ಅವರು ಸತ್ತಂತೆಯೇ!

ನಮ್ಮಲ್ಲಿ ಹಸಿವಿನಿಂದ ಸತ್ತವರು ಕಡಿಮೆಯೇ; ಚಿಕಿತ್ಸೆಗೆ ಹಣವನ್ನು ಹೊಂದಿಸಲಾಗದೆ ರೋಗದಿಂದ ನರಳಿ ನರಳಿ ಮರಣ ಹೊಂದುತ್ತಿರುವವರೇ ಹೆಚ್ಚು. ಆದ್ದರಿಂದ ಸಮಾಜದ ಪ್ರತಿಯೊಬ್ಬ ನಾಗರಿಕರಿಗೂ ಬೇಕಿದೆ ಆರೋಗ್ಯ ಮತ್ತು ಶಿಕ್ಷಣ, ಅದೂ ಸಂಪೂರ್ಣ ಉಚಿತವಾಗಿ.

**- ಮಿರ್ಲೆ ಚಂದ್ರಶೇಖರ,** (ಲೇಖಕರು ಹವ್ಯಾಸಿ ಬರಹಗಾರರು)

## ಪ್ರೀತಮ್‌ಗೌಡ ಹೇಳಿಕೆ ಪಕ್ಷದ ಪರ, ಹಿತಕ್ಕಾಗಿ

» ಮೊದಲನೇ ಪುಟದಿಂದ

ಕೈಗೊಳ್ಳುವ ತೀರ್ಮಾನಕ್ಕೆ ನಾವೆಲ್ಲರೂ ಬದ್ಧ. ಈಗಲೂ ಬಿಜೆಪಿಯ ಎಲ್ಲರೂ ಪಕ್ಷದ ಪರವಾಗಿಯೇ ಮಾತನಾಡುತ್ತೇವೆ. ಹೊಂದಾಣಿಕೆ ವಿಚಾರದಲ್ಲಿ ಪಕ್ಷ ಹೇಳುವುದನ್ನು ಪಾಲಿಸುತ್ತೇವೆ ಎಂದರು.

**ಪ್ರಿಯಾಂಕ್ ಖರ್ಗೆ ಹೇಳಿಕೆಗೆ ಖಂಡನೆ**

ಆರ್‌ಎಸ್‌ಎಸ್ ಸಂಘಟನೆಯನ್ನು ದೆವ್ವಕ್ಕೆ ಹೋಲಿಸಿ ಲಘುವಾಗಿ ಮಾತನಾಡಿ ರುವ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆಯನ್ನು ಖಂಡಿಸಿದ ಅವರು, ಜವಾಬ್ದಾರಿ ಯುತ ಸಚಿವರಾಗಿ, ಹಿರಿಯ ರಾಜಕೀಯ ಮುತ್ಸದ್ಧಿ ಮಲ್ಲಿಕಾರ್ಜುನ ಖರ್ಗೆ ಅವರ ಪುತ್ರರಾಗಿ ಅರಿತು ಮಾತನಾಡಬೇಕು. 1925 ರಲ್ಲಿ ಹುಟ್ಟಿದ ಆರ್‌ಎಸ್‌ಎಸ್ ರಾಷ್ಟ್ರಕ್ಕೆ ಉತ್ತಮ ವ್ಯಕ್ತಿತ್ವ ರೂಪಿಸಿ ಕೊಳ್ಳಲು ನೆರವಾಗುತ್ತಿದೆ. ಯಾವುದೇ ಗಲಭೆ ಮಾಡಿಸಿಲ್ಲ, ಪ್ರಕೃತಿ ವಿಕೋಪ ಇತ್ಯಾದಿ ಸಂದರ್ಭದಲ್ಲಿ ಸ್ವಯಂ ಸೇವೆ ಮಾಡುತ್ತಾ ಬರುತ್ತಿದೆ ಎಂದರು.

ಹಿಂದೆ ಮಹಾತ್ಮ ಗಾಂಧೀಜಿ, ಡಾ.ಬಿ.ಆರ್.ಅಂಬೇಡ್ಕರ್, ನಂತರದಲ್ಲಿ ಕಾಂಗ್ರೆಸ್‌ನ ಪ್ರಣಬ್ ಮುಖರ್ಜಿ ಮೊದಲಾದವರು ಭೇಟಿ ನೀಡಿ ಕಾರ್ಯ ವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಭಾರತಾಂಬೆಯ ಘನತೆಯನ್ನು ಮತ್ತಷ್ಟು ವೃದ್ಧಿ ಮಾಡಲು ಆರ್‌ಎಸ್‌ಎಸ್ ಶ್ರಮಿಸುತ್ತಿದೆ. ಇಂತಹ ಸಂಘಟನೆ ಬಗ್ಗೆ ಮಾತನಾಡಿದರೆ ದೊಡ್ಡ ಸ್ಥಾನಮಾನ ಸಿಗಬಹುದೆಂದು ಮಾತನಾಡುತ್ತಿರಬಹುದು. ಇವರ ಅವಧಿಯಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗೆ ಕಡಿವಾಣ ಹಾಕಲು ಪ್ರಯತ್ನಿಸಿದರೂ, ನ್ಯಾಯಾಲಯ ನಮಗೆ ಅವಕಾಶ ನೀಡಿದೆ ಎಂದು ಹೇಳಿದರು.

ನೂರು ವರ್ಷ ಕಾಲ ಒಂದು ಸಂಘಟನೆ ಉಳಿಯಬೇಕೆಂದರೆ ಸುಲಭವಲ್ಲ, ಉತ್ತಮ ರಾಷ್ಟ್ರ ನಿರ್ಮಾಣವೇ ಆರ್‌ಎಸ್‌ಎಸ್ ಉದ್ದೇಶ. ದೇಶದ ಒಳಿತಿಗಾಗಿ ಕೆಲಸ ಮಾಡುತ್ತಿದೆ. ಅದರ ಬಗ್ಗೆ ತಿಳಿದು ಮಾತನಾಡಲಿ. ನಾಡಿನ ಜನರು ಆರ್‌ಎಸ್‌ಎಸ್ ಬಗ್ಗೆ ಅಪಾರ ಗೌರವ ಇಟ್ಟುಕೊಂಡಿದ್ದಾರೆ. ಅದರ ಚಟುವಟಿಕೆಗಳನ್ನು ಯಾರಿಂದಲೂ ಬಂದ್ ಮಾಡಿಸಲು ಸಾಧ್ಯವಿಲ್ಲವೆಂದು ಎಚ್ಚರಿಸಿದರು.

ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ನಗರಸಭೆ ಮಾಜಿ ಅಧ್ಯಕ್ಷ ಆರ್. ಮೋಹನ್ ಕುಮಾರ್, ವಿವಿಧ ಘಟಕಗಳ ಪದಾಧಿಕಾರಿಗಳಾದ ಹರ್ಷಿತ್, ಪ್ರಸನ್ನ ಕುಮಾರ್, ಶ್ರೀಕಾಂತ್ ಇದ್ದರು.

# ಆತ್ಮ ನಿರ್ಭರವೋ-ಅಮೇರಿಕಾ ನಿರ್ಭರವೋ: ಕೇಂದ್ರದ ವಿರುದ್ಧ ಕಾಂಗ್ರೆಸ್ ವಾಗ್ದಾಳಿ


• ಪ್ರಜೋದಯ ವರದಿ

**ನವದೆಹಲಿ:** ಭಾರತ-ಅಮೇರಿಕ ವ್ಯಾಪಾರ ಒಪ್ಪಂದದ ಮೂಲಕ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ದೇಶವನ್ನು ಆತ್ಮ ನಿರ್ಭರದ (ಸ್ವಾವಲಂಬಿ) ಬದಲಿಗೆ ಅಮೇರಿಕ ನಿರ್ಭರ (ಅಮೇರಿಕ ಅವಲಂಬಿತ) ಮಾಡಿದೆ. ಇದು ರೈತರ ಜೀವನೋಪಾಯದ ಮೇಲಿನ ದಾಳಿಯಾಗಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಭಾರತ-ಅಮೇರಿಕ ವ್ಯಾಪಾರ ಒಪ್ಪಂದವು ಬಲವಂತದಿಂದ ಏರ್ಪಟ್ಟಿದೆಯೇ?, ಇದು ದೇಶದ ಇಂಧನ ಭದ್ರತೆಯ ಮೇಲೆ ಪರಿಣಾಮ ಬೀರುವುದರ ಜೊತೆಗೆ ವ್ಯಾಪಾರದಲ್ಲಿ ಅಸಮತೋಲನವನ್ನು ಸೃಷ್ಟಿಸುತ್ತದೆಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ ದೂರಿದ್ದಾರೆ.

ಈ ಒಪ್ಪಂದವು ಸೋಯಾಬೀನ್ ಎಣ್ಣೆ, ಮೆಕ್ಕೆಜೋಳ, ಸೋರ್ಗಮ್ (ಸಿಹಿ ಜೋಳ) ಸೇರಿ ಅಮೇರಿಕದ ಕೃಷಿ ಮತ್ತು ಆಹಾರ ಉತ್ಪನ್ನಗಳ ಆಮದನ್ನು ಅನುಮತಿಸುವ ಮೂಲಕ ರೈತರ ಜೀವನ ಮತ್ತು ಜೀವನೋಪಾಯದ ಮೇಲೆ ನಡೆಸುವಂತಹ ನೇರ ದಾಳಿಯಾಗಿದೆ ಎಂದು ಅವರು ಕಿಡಿಕಾರಿದ್ದಾರೆ.

ನಮ್ಮದು ಸದೃಢ ಸರ್ಕಾರ ಎಂದು ಹೇಳಿಕೊಳ್ಳುತ್ತಿದ್ದ ಬಿಜೆಪಿ ನಾಯಕರು ದೇಶದ ಹಿತಾಸಕ್ತಿ ಯನ್ನು ರಕ್ಷಿಸುವ ಬದಲು, ದೇಶದ



ಸ್ವಾವಲಂಬನೆ ಮತ್ತು ಸ್ವಾತಂತ್ರ್ಯವನ್ನು ಬಿಟ್ಟು ಕೊಟ್ಟಿದೆ. ಇದು ಸದೃಢ ಸರ್ಕಾರವೇ ಅಥವಾ ಅಸಹಾಯಕ ಸರ್ಕಾರವೇ?, ಇದು ಆತ್ಮ ನಿರ್ಭರ ಭಾರತವೇ ಅಥವಾ ಅಮೇರಿಕ ನಿರ್ಭರ ಭಾರತವೇ? ಎಂದು ಜನರು ಪ್ರಶ್ನಿಸುವಂತಾಗಿದೆ ಎಂದು ಗುಡುಗಿದ್ದಾರೆ.

ಸುಂಕ ರಹಿತ ಅಡೆತಡೆಗಳನ್ನು ತೆಗೆದು ಹಾಕಲು ಒಪ್ಪಿಗೆ ಸೂಚಿಸುವ ಮೂಲಕ ಕೇಂದ್ರ ಸರ್ಕಾರವು ರೈತರಿಗೆ ನೀಡುವ ಸಬ್ಸಿಡಿಗಳನ್ನು ತೆಗೆದುಹಾಕಲು ಒಪ್ಪಿ ಕೊಂಡಿದೆ. 2025ರಲ್ಲಿ ಅಮೇರಿಕವು ರೈತರಿಗೆ 1.45 ಲಕ್ಷ ಕೋಟಿ ಸಬ್ಸಿಡಿಗಳನ್ನು ನೀಡಿತ್ತು. ಅದಕ್ಕೆ ಪ್ರತಿಯಾಗಿ ನಮ್ಮ ದೇಶದಲ್ಲಿ ಬಿಜೆಪಿ ಸರ್ಕಾರ ರೈತರಿಗೆ ವರ್ಷಕ್ಕೆ ಕೇವಲ 6,000 ನೀಡುತ್ತಿದೆ. ಆದರೆ, ದುಬಾರಿ ಬೆಲೆಯ ಡೀಸೆಲ್, ರಸಗೊಬ್ಬರ, ವಿದ್ಯುತ್ ಮತ್ತು ಕೀಟನಾಶಕಗಳ ಮೂಲಕ ಹೆಚ್ಚಿನದನ್ನು ವಸೂಲಿ ಮಾಡುತ್ತಿದೆಂದು ಕುಟುಕಿದ್ದಾರೆ. ವ್ಯಾಪಾರ ಒಪ್ಪಂದದ ಮೂಲಕ ರೈತರಿಗೆ ನೀಡಲಾಗುವ ಉಳಿದ ಪ್ರಯೋಜನಗಳನ್ನುಸಹ ಕಸಿದುಕೊಳ್ಳಲಾಗುತ್ತಿದೆ. ಈ ನಿರ್ಧಾರವು ಇಡೀ ರೈತ ಸಮುದಾಯಕ್ಕೆ ಅತ್ಯಂತ ಅಪಾಯಕಾರಿ ಎಂದಿದ್ದಾರೆ.

ವಾರ್ಷಿಕವಾಗಿ 42.5 ಕೋಟಿ ಟನ್ ಮೆಕ್ಕೆಜೋಳ ಉತ್ಪಾದಿಸುವ ಅಮೇರಿಕಾಕ್ಕೆ ಹೆಚ್ಚುವರಿ ಮೆಕ್ಕೆಜೋಳವನ್ನು ಮಾರಾಟ ಮಾಡಲು ಮಾರುಕಟ್ಟೆಯ ಅಗತ್ಯವಿದೆ. ಆದರೆ, ಭಾರತ 430 ಲಕ್ಷ ಟನ್ ಮೆಕ್ಕೆಜೋಳ ಉತ್ಪಾದಿಸುತ್ತದೆ. ಅಮೇರಿಕಾದಿಂದ ಮೆಕ್ಕೆಜೋಳ ಆಮದು ಮಾಡಿಕೊಳ್ಳುವುದರಿಂದ ಕರ್ನಾಟಕ, ಮಧ್ಯ ಪ್ರದೇಶ, ಮಹಾರಾಷ್ಟ್ರ, ರಾಜಸ್ಥಾನ, ಉತ್ತರ ಪ್ರದೇಶ, ಬಿಹಾರ, ತೆಲಂಗಾಣ ಮತ್ತು ಗುಜರಾತ್ ರೈತರಿಗೆ ತೊಂದರೆಯಾಗಲಿದೆ ಎಂದು ವಿವರಿಸಿದ್ದಾರೆ.

ಮಹಾರಾಷ್ಟ್ರ, ಕರ್ನಾಟಕ, ರಾಜಸ್ಥಾನ, ಗುಜರಾತ್, ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶ ಗಳಲ್ಲಿ 52 ಲಕ್ಷ ಟನ್ ಸಿಹಿ ಜೋಳ (ಸ್ವೀಟ್ ಸೋರ್ಗಮ್) ಬೆಳೆಯಲಾಗುತ್ತದೆ. ಆದರೆ, ಅಮೇರಿಕವು 87 ಲಕ್ಷ ಟನ್ ಉತ್ಪಾದಿಸುತ್ತದೆ. ಇದು ವಿಶ್ವದಲ್ಲೇ ಅತಿ ಹೆಚ್ಚು. ಸುಂಕ ರಹಿತವಾಗಿ ಅಮೇರಿಕದಿಂದ ಸೋರ್ಗಮ್ ಅನ್ನು ಆಮದು ಮಾಡಿಕೊಂಡರೆ, ನಮ್ಮ ದೇಶದ ರೈತರ ಗತಿ ಏನಾಗಬೇಕು. ಸೋಯಾಬೀನ್ ಎಣ್ಣೆಯ ವಿಷಯದಲ್ಲೂ ಇದೇ ಆಗಿದೆ ಎಂದು ಹೇಳಿದ್ದಾರೆ.

## ಆಸ್ಪತ್ರೆ, ಕಚೇರಿಗಳಿಗೆ ಸಚಿವ ಕೃಷ್ಣಭೈರೇಗೌಡ ದಿಢೀರ್ ಭೇಟಿ

» ಮೊದಲನೇ ಪುಟದಿಂದ

ಕಾರಿ ಬಿ.ಆರ್. ಪೂರ್ಣಿಮಾ ಅವರಿಗೆ ಆನ್‌ಲೈನ್ ಸಮಸ್ಯೆ ಸರಿದೂಗಿಸಲು ಕ್ರಮಕೈಗೊಳ್ಳಲು ಸೂಚನೆ ನೀಡಿದರು.

ಬಳಿಕ ಮೂಡಲಹಿಪ್ಪೆ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಚಿಕಿತ್ಸೆಗೆ ಬಂದಿದ್ದ ರೋಗಿಗಳ ಆರೋಗ್ಯ ಸ್ಥಿತಿಯನ್ನು ವಿಚಾರಿಸಿದರು. ನಂತರ ವೈದ್ಯೆ ಡಾ.ಪ್ರೀತಿ ಅವರಿಂದ ಆಸ್ಪತ್ರೆಯಲ್ಲಿನ ವೈದ್ಯಕೀಯ ವ್ಯವಸ್ಥೆ ಮತ್ತು ಸಮಸ್ಯೆಗಳ ಕುರಿತು ಮಾಹಿತಿ ಪಡೆದರು. ಹಗಲು ಸೇವೆ ನೀಡಲಾಗುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸುತ್ತಲಿನ 10 ಗ್ರಾಮಗಳ ಈ ಆಸ್ಪತ್ರೆ ವ್ಯಾಪ್ತಿಗೆ ಒಳಪಟ್ಟಿವೆ. ನಿತ್ಯ 80 ರಿಂದ 90 ಮಂದಿ ರೋಗಿಗಳು ಚಿಕಿತ್ಸೆಗೆ ಬರುತ್ತಾರೆ. ಫಾರ್ಮಾಸಿಸ್ಟ್ ವಾರಕ್ಕೆ ಒಂದು ದಿನ ನಿಯೋಜಿತ ಇದ್ದಾರೆ. ಇದರಿಂದ ಔಷಧಿ, ಮಾತ್ರೆ ನೀಡಲು ವೈದ್ಯರೇ ಮುಂದಾಗಬೇಕಿದ್ದು, ನಿಬಾಯಿಸಲು ಸಾಕಷ್ಟು ಸಮಯ ಬೇಕಾಗುವ ಕಾರಣ ರೋಗಿಗಳು ಕಾದು ಕೂರಬೇಕಾಗುತ್ತಿದೆ. ಅದರಿಂದ ತೊಂದರೆಯಾಗುತ್ತಿರುವುದಾಗಿ ವೈದ್ಯರು ಗಮನಕ್ಕೆ ತಂದಾಗ ಯಾವುದೇ ಪ್ರತಿಕ್ರಿಯೆ ನೀಡದ ಸಚಿವರು ಮಾಹಿತಿ ಪಡೆದು ತೆರಳಿದರು.

ಪಟ್ಟಣದ ಸರ್ಕಾರಿ ಆಸ್ಪತ್ರೆ ಮತ್ತು ತಾಲ್ಲೂಕು ಕಚೇರಿಗೆ ಭೇಟಿ ನೀಡುವರೆಂಬ ನಿರೀಕ್ಷೆ ಇತ್ತು. ಆದರೆ, ಚನ್ನರಾಯಪಟ್ಟಣದಿಂದ ಮೂಡಲಹಿಪ್ಪೆ ನಂತರ ಪಟ್ಟಣದ ಬೈಪಾಸ್‌ನಿಂದ ತಿರುವು ಪಡೆದು ಹಾಸನಕ್ಕೆ ತೆರಳಿದರು.

## ಜನತಾ ನ್ಯಾಯಾಲಯ ಸದ್ಬಳಕೆಗೆ ಕರೆ

» ಮೊದಲನೇ ಪುಟದಿಂದ

ನ್ಯಾಯಾಲಯದಲ್ಲಿ ಬಾಕಿ ಇರುವ ಎಲ್ಲಾ ವಿಧದ ಸಿವಿಲ್ ವ್ಯಾಜ್ಯಗಳು, ಬಗೆಹರಿಸಬಹುದಾದ ಕ್ರಿಮಿನಲ್ ಪ್ರಕರಣಗಳು, ಬ್ಯಾಂಕ್‌ವಸೂಲಾತಿಪ್ರಕರಣ, ಮೋಟಾರ್‌ವಾಹನ ಪರಿಹಾರಪ್ರಕರಣಗಳು, ಕಂದಾಯ ಪ್ರಕರಣಗಳು, ಜನನ ನೋಂದಣಿ ಪ್ರಕರಣಗಳು, ಜೀವನಾಂಶ ಪ್ರಕರಣಗಳು ಸೇರಿ ಇನ್ನಿತರೆ ಲಘು ಕ್ರಿಮಿನಲ್, ಮನೆಕಂದಾಯ ಮತ್ತು ನೀರಿನ ಕರವಸೂಲಿ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಲು ಅವಕಾಶವಿದೆ ಎಂದರು.

ಕಕ್ಷಿದಾರರು ವಕೀಲರ ಮೂಲಕ ಅಥವಾ ಖುದ್ದಾಗಿ ರಾಜಿ ಸಂಧಾನದ ಮೂಲಕ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಬಹುದು. ಇದರಿಂದ ಸಮಯದ ಉಳಿತಾಯ, ಶೀಘ್ರ ನ್ಯಾಯದಾನ, ಸೌಹಾರ್ದಿತ ಬಾಂಧವ್ಯ ವೃದ್ಧಿಸಲಿದ್ದು ಕಕ್ಷಿದಾರರು ರಾಷ್ಟ್ರೀಯ ಲೋಕ್ ಅದಾಲತ್‌ನ ಸದುಪಯೋಗವನ್ನು ಪಡೆಯಬಹುದಾಗಿದೆ ಎಂದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜಿ.ಕೆ. ದಾಕ್ಷಾಯಿಣಿ ಅವರು ಮಾತನಾಡಿ, ಫೆ.28ರಂದು ಉಪವಿಭಾಗಾಧಿಕಾರಿ ನ್ಯಾಯಾಲಯಗಳಲ್ಲಿ ಬಾಕಿ ಉಳಿದಿರುವ ಹಿರಿಯ ನಾಗರಿಕರ ಪಾಲನೆ ಮತ್ತು ಸಂರಕ್ಷಣೆ ಕಾಯ್ದೆ ಅಡಿಯಲ್ಲಿ ದಾಖಲಾಗಿರುವ ಪ್ರಕರಣಗಳು ಮತ್ತು ಜಿಲ್ಲಾಧಿಕಾರಿಯವರ ನ್ಯಾಯಾಲಯದಲ್ಲಿ ಬಾಕಿ ಉಳಿದಿರುವ ಹಿರಿಯ ನಾಗರೀಕರ ಪಾಲನೆ ಮತ್ತು ಸಂರಕ್ಷಣೆ ಕಾಯ್ದೆಯಡಿಯಲ್ಲಿ ದಾಖಲಾಗಿರುವ ಮೇಲ್ಮನವಿ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಲು ವಿಶೇಷ ಲೋಕ್ ಅದಾಲತ್‌ನ್ನು ಆಯೋಜಿಸಲಾಗಿದ್ದು ಇದರ ಸದುಪಯೋಗವನ್ನು ಹಿರಿಯ ನಾಗರೀಕರು ಪಡೆಯಬಹುದಾಗಿದೆ ಎಂದು ತಿಳಿಸಿದರು.

## ಶಿಕ್ಷಣ ಇಲಾಖೆ ನೌಕರರ ಸಂಘದ ಪದಗ್ರಹಣ

» ಮೊದಲನೇ ಪುಟದಿಂದ

ಶಿಕ್ಷಣ ಇಲಾಖೆಯ ವಿವಿಧ ಹಂತಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರ ಪರಿಶ್ರಮ ಗುರುತಿಸಿ ಗೌರವಿಸುವುದು ಸಂಘದ ಮುಖ್ಯ ಉದ್ದೇಶ, ಜಿಲ್ಲೆಯ ಪ್ರಾಥಮಿಕ, ಪ್ರೌಢ, ಪದವಿ ಪೂರ್ವ ಕಾಲೇಜು, ಬೋಧಕೇತರ ಹಾಗು ಲಿಪಿಕ ವರ್ಗದ ನೌಕರರಿಗೆ ಉತ್ತಮ ಸೇವಾ ಪ್ರಶಸ್ತಿ ಪ್ರದಾನ ಮಾಡಲಾಗುವುದು. 1ನೇ ತರಗತಿಯಿಂದ ದ್ವಿತೀಯ ಪಿಯುಸಿವರೆಗೆ ಕೆ.ಪಿ.ಎಸ್. ಮಾದರಿ ಒಂದೇ ಸಂಘಟನೆಯಡಿ ಎಲ್ಲಾ ವೃಂದಗಳನ್ನೂ ಒಗ್ಗೂಡಿಸುವ ಪ್ರಯತ್ನ ನಮ್ಮದಾಗಿದೆ ಎಂದರು.

ಶಿಕ್ಷಣ ಇಲಾಖೆಯ ಎಲ್ಲಾ ವರ್ಗಗಳ ನೌಕರರ ಸಾಮಾನ್ಯ ಹಿತಾಸಕ್ತಿ ರಕ್ಷಿಸಿ ಪ್ರೋತ್ಸಾಹಿಸುವುದು, ನೌಕರರ ನಡುವೆ ಬಾಂಧವ್ಯ ಬೆಳೆಸುವುದು ಮತ್ತು ಪರಸ್ಪರ ಸಹಕಾರದ ಮನೋಭಾವ ವೃದ್ಧಿಸುವುದು ಸಂಘದ ಪ್ರಮುಖ ಗುರಿ ಹೊಂದಿದ್ದೇವೆ. ನೌಕರರಸೇವಾ ವೇತನ, ನಿವೃತ್ತಿ ವೇತನ, ವಿವಿಧ ಭತ್ಯೆ ಹಾಗು ಭವಿಷ್ಯ ನಿಧಿ ಸುಧಾರಣೆಗಾಗಿ ಸಲಹೆ ನೀಡುವುದು ಮತ್ತು ಅಗತ್ಯ ಕ್ರಮ ಕೈಗೊಳ್ಳುವುದು ಸಂಘದ ಧ್ಯೇಯವಾಗಿದೆ. ಜೊತೆಗೆ ಸಂಘದ ಕಾರ್ಯಚಟುವಟಿಕೆಗಳಿಗೆ ಅಗತ್ಯವಿರುವವಂತಿಕೆ, ದೇಣಿಗೆ ಸಂಗ್ರಹಿಸಿ ಸಮರ್ಪಕವಾಗಿ ಬಳಕೆ ಮಾಡುವ ವ್ಯವಸ್ಥೆ ಸಹ ಮಾಡಲಾಗಿದೆಂದು ಹೇಳಿದರು. ಸಂಘದ ರಾಜ್ಯ ಪರಿಷತ್ತು ಸದಸ್ಯ ಎಸ್.ಎನ್. ಶಿವಕುಮಾರ್,ಜಿಲ್ಲಾ ಕಾರ್ಯದರ್ಶಿ ಎಂ.ಪಿ.ಶ್ರೀಕಾಂತ್ ಇತರರಿದ್ದರು.

## ಋತುಚಕ್ರ ರಜೆ ಅಗತ್ಯತೆ: ಫೆ.27 ರಂದು ಪ್ರಬಂಧ ಸ್ಪರ್ಧೆ

• ಪ್ರಜೋದಯ ವರದಿ

**ಹಾಸನ:** ರಾಜ್ಯ ಸರ್ಕಾರ ಜಾರಿಗೆ ತಂದಿರುವ ಮಹಿಳೆಯರ ಋತುಚಕ್ರ ರಜೆಯ ಅಗತ್ಯತೆಯ ಅರಿವು ಮೂಡಿಸುವ ಉದ್ದೇಶದಿಂದ ಫೆ.27ರಂದು ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆ ಆಯೋಜಿಸಲಾಗಿದೆಂದು ಸಂತೋಷ್ ಲಾಡ್ ಅಭಿಮಾನಿಗಳ ಬಳಗದ ಹೆಚ್. ಆರ್.ವಿನೋದ್ ಕುಮಾರ್ ಅವರು ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ಪರ್ಧೆಯಲ್ಲಿ ಪ್ರಸ್ತುತ ಸಾಲಿನ ಪಿಯುಸಿ ಹಾಗು ಎಲ್ಲಾ ಸ್ನಾತಕೋತ್ತರ ಹಂತದ ವಿದ್ಯಾರ್ಥಿನಿಯರಿಗೆ ಮಾತ್ರ ಅವಕಾಶ ನೀಡಲಾಗಿದೆ. ಪ್ರಬಂಧ ಕನಿಷ್ಠ 5 ಪುಟ ಇರಬೇಕು. ಅವಧಿ ಒಂದೂವರೆ ಗಂಟೆ ಇರಲಿದೆ. ಪ್ರಥಮ ಬಹುಮಾನ 25 ಸಾವಿರ ರೂ., ದ್ವಿತೀಯ ಬಹುಮಾನ 10 ಮತ್ತು




ತೃತೀಯ ಬಹುಮಾನ 5 ಸಾವಿರ ಹಾಗೂ 50 ಸಮಾಧಾನಕರ ಬಹುಮಾನ ನೀಡಲಾಗುವುದೆಂದರು. ನಗರದ ಎಂ.ಜಿ. ರಸ್ತೆಯ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಲ್ಲಿ ಪ್ರಬಂಧ ಬರೆಯಬೇಕಿದ್ದು, ಸ್ಪರ್ಧಾಳುಗಳು ಮಧ್ಯಾಹ್ನ 12:20ಕ್ಕೆ ಹಾಜರಾಗಬೇಕು. ಕಾಲೇಜಿನ ಗುರುತಿನ ಚೀಟಿ ತರಬೇಕು. ನೋಂದಣಿಗೆ ಫೆ.22 ಕಡೆಯ ದಿನ ಎಂದರು.

ಕಾರ್ಮಿಕ ಸಚಿವ ಸಂತೋಷ್ ಲಾಡ್ ಪ್ರಮುಖ ಪಾತ್ರವಹಿಸಿದ್ದಾರೆ. ಸಚಿವರ ಜನ್ಮದಿನ ಹಾಗು ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಈ ಪ್ರಬಂಧ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಮಹಿಳೆಯರ ಆರೋಗ್ಯ ಮತ್ತು ಗೌರವದ ದೃಷ್ಟಿಯಿಂದ ಋತುಚಕ್ರ ರಜೆ ಜಾರಿಗೆ ತಂದಿದೆ. ಈ ಬಗ್ಗೆ ಯುವ ಪೀಳಿಗೆಗೆ ಜಾಗೃತಿ ಮೂಡಿಸುವುದು ಕಾರ್ಯಕ್ರಮದ ಉದ್ದೇಶ. ಋತುಚಕ್ರದ ಸಂದರ್ಭದಲ್ಲಿ ಮಹಿಳೆಯರು ಒತ್ತಡಕ್ಕೆ ಒಳಗಾದಾಗ ಅದು ಕುಟುಂಬ ಮತ್ತು ಸಮಾಜದ ಮೇಲೆ ಪರಿಣಾಮ ಬೀರುತ್ತದೆ. ಇಂತಹ ಸಂದರ್ಭದಲ್ಲಿ ಮಹಿಳೆ ಮಾನಸಿಕ, ದೈಹಿಕವಾಗಿ ಕುಗ್ಗುವುದನ್ನು ಹಲವು ವೈಜ್ಞಾನಿಕ ವರದಿ ಮೂಲಕ ಮನಗಂಡ ಸರ್ಕಾರ ಒಂದು ದಿನದ ರಜೆ ನೀಡಿದೆ ಎಂದು ಹೇಳಿದರು.

ಕಾಂಗ್ರೆಸ್ ಮುಖಂಡರಾದ ರಾಜು, ಇಮ್ರಾನ್ ಖಾನ್, ಮೊಹಮ್ಮದ್ ಮೋಹಿನ್, ಮುಜಾಯಿದ್ ಇದ್ದರು.

## ಕೆರೆ ಏರಿಯ ಮರಕ್ಕೆ ಬಸ್ ಡಿಕ್ಕಿ: ಶಾಲಾ ಮಕ್ಕಳು ಪಾರು

• ಪ್ರಜೋದಯ ವರದಿ

**ಹೊಳೆನರಸೀಪುರ:** ಖಾಸಗಿ ಶಾಲೆಗೆ ಮಕ್ಕಳನ್ನು ಕರೆ ದೊಯ್ಯುತ್ತಿದ್ದ ಬಸ್ ಕೆರೆಯ ಏರಿ ಮೇಲೆ ಚಾಲಕನ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದು ಕೆರೆ ಕಡೆಗೆ ವಾಲಿನಿಂತ ಘಟನೆ ತಾಲ್ಲೂಕಿನ ಹಳ್ಳಿಮೈಸೂರು ಹೋಬಳಿ ಮುಕ್ಕನಹಳ್ಳಿ ಗ್ರಾಮದ ಬಳಿ ನಡೆದಿದೆ. ಕೂದಲೆಳೆ ಅಂತರದಲ್ಲಿ ಬಸ್ ಕೆರೆಗೆ ಬೀಳುವುದು ತಪ್ಪಿದ್ದು, ಬಸ್‌ನಲ್ಲಿದ್ದ 40 ವಿದ್ಯಾರ್ಥಿಗಳು ಅಪಾಯದಿಂದ ಪಾರಾಗಿದ್ದಾರೆ. ಅಪಘಾತಕ್ಕೀಡಾಗಿರುವ ಬಸ್ ಶ್ರೀಸಿದ್ದರಾಮೇಶ್ವರ ಶಾಲೆಗೆ ಸೇರಿದ್ದಾಗಿದ್ದು, ಸೋಮವಾರ ಬೆಳಿಗ್ಗೆ ಶಾಲೆಗೆ ಮಕ್ಕಳನ್ನು ಕರೆದೊಯ್ಯುವ ವೇಳೆ ಅವಘಡ ನಡೆದಿದೆ. ಮರಕ್ಕೆ ಬಸ್ ಡಿಕ್ಕಿ ಹೊಡೆಯುತ್ತಿದ್ದಂತೆ ಬಸ್‌ನಿಂದ ವಿದ್ಯಾರ್ಥಿಗಳು ಕೆಳಗಿಳಿದ ಪರಿಣಾಮ ಅದೃಷ್ಟವಶಾತ್ ಭಾರೀ ಅನಾಹುತ ತಪ್ಪಿದೆ. ಸುದ್ದಿ ತಿಳಿಯುತ್ತಿದ್ದಂತೆ ಘಟನಾ ಸ್ಥಳದಲ್ಲಿ ವಿದ್ಯಾರ್ಥಿಗಳ ಪೋಷಕರು ಜಮಾಯಿಸಿದ್ದು, ಘಟನೆ ಬಳಿಕ ಸ್ಕೂಲ್ ಬಸ್‌ಗೆ



ಎಫ್‌ಸಿ ಹಾಗು ಇನ್ಶೂರೆನ್ಸ್ ಇಲ್ಲದಿರುವುದು ಬೆಳಕಿಗೆ ಬಂದಿದೆ. ಹಳ್ಳಿಮೈಸೂರು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ

# ರಾಗಿ, ಭತ್ತ ಬೆಂಬಲ ಬೆಲೆ ಖರೀದಿ ಕೇಂದ್ರಕ್ಕೆ ಚಾಲನೆ

## ನೈಜ ರೈತರಿಗೆ ಸೌಲಭ್ಯ ದೊರಕುವಂತೆ ಕ್ರಮ ವಹಿಸಿ ಶಾಸಕ ಎ.ಮಂಜು

• ಪ್ರಜೋದಯ ವರದಿ

**ಅರಕಲಗೂಡು:** ಸರ್ಕಾರ ನಿಗದಿ ಮಾಡಿರುವ ರಾಗಿ, ಭತ್ತ ಬೆಂಬಲ ಬೆಲೆ ಖರೀದಿ ಕೇಂದ್ರಕ್ಕೆ ಚಾಲನೆ ನೀಡಿದ್ದು, ರೈತರಿಗೆ ಪಾರದರ್ಶಕತೆ ತೂಕದಲ್ಲಿ ಮೋಸವಾಗದಂತೆ ಹಾಗೂ ನೈಜ ರೈತರಿಗೆ ಮಾತ್ರ ಸೌಲಭ್ಯ ದೊರಕುವಂತೆ ಕ್ರಮ ವಹಿಸಬೇಕು. ಏನಾದರೂ ಲೋಪ ಕಂಡುಬಂದರೆ ಸಹಿಸುವುದಿಲ್ಲವೆಂದು ಶಾಸಕ ಎ.ಮಂಜು ಅವರು ಎಚ್ಚರಿಕೆ ನೀಡಿದರು.

ಪಟ್ಟಣದ ಎಪಿಎಂಸಿ ಆವರಣ ಮತ್ತು ರಾಮನಾಥಪುರ ರೇಷ್ಮೆ ಇಲಾಖೆ ತರಬೇತಿ ಕೇಂದ್ರದಲ್ಲಿ ಈ ಸಾಲಿನ ಬೆಂಬಲ ಬೆಲೆ ಯೋಜನೆಯಡಿ ರಾಗಿ ಮತ್ತು ಭತ್ತದ ಖರೀದಿ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ರಾಗಿ ಕ್ವಿಂಟಾಲ್‌ಗೆ 4,886 ರೂ. ಮತ್ತು ಭತ್ತ ಕ್ವಿಂಟಾಲ್‌ಗೆ 2,369 ರಿಂದ 2,389 ರೂ. ತನಕ ಬೆಂಬಲ ಬೆಲೆ ನಿಗದಿಯಾಗಿದೆ. ಏಕ ಕಾಲದಲ್ಲಿ ಈ ಎರಡು ಖರೀದಿ ಕೇಂದ್ರದಲ್ಲಿ ಬೆಂಬಲ ಬೆಲೆಯ ರಾಗಿ, ಭತ್ತ ಖರೀದಿ ನಡೆಯಲಿದೆ. ರೈತರು ಪ್ರಯೋಜನ ಪಡೆದುಕೊಳ್ಳಬೇಕೆಂದು ಸಲಹೆ ನೀಡಿದರು.

ರಾಮನಾಥಪುರ ಖರೀದಿ ಕೇಂದ್ರ ವ್ಯಾಪ್ತಿಯಲ್ಲಿ ಭತ್ತದ ಬೆಳೆಗೆ 16



ಹಾಗು ರಾಗಿಗೆ 2,417 ಮಂದಿ ರೈತರು ಹೆಸರು ನೋಂದಾಯಿಸಿ ಕೊಂಡಿದ್ದಾರೆ. ಅದೇ ರೀತಿ ಅರಕಲಗೂಡು ಎಪಿಎಂಸಿ ವ್ಯಾಪ್ತಿಯಲ್ಲಿ ಭತ್ತದ ಬೆಳೆಗೆ 6 ಹಾಗು ರಾಗಿಗೆ 953 ಮಂದಿ ರೈತರು ಹೆಸರು ನೋಂದಾಯಿಸಿ ಕೊಂಡಿದ್ದಾರೆ. ನೊಂದಣಿ ಪ್ರಕ್ರಿಯೆ ಬರುವ ಮಾರ್ಚ್ 31ರ ತನಕ ಅವಕಾಶವಿರುತ್ತದೆ. ಇನ್ನೂ ಕೂಡ ಹೆಸರು ನೊಂದಾಯಿಸಿಕೊಳ್ಳದ ರೈತರು ಹೆಸರು ನೋಂದಾಯಿಸಿ ಕೊಳ್ಳಬೇಕೆಂದರು.

ಕಳೆದ ಬಾರಿ ಕೆಲವು ವರ್ತಕರು ರೈತರ ಹೆಸರಿನಲ್ಲಿ ನೋಂದಣಿ ಮಾಡಿ ಮಾರಾಟ ಮಾಡುವ ದಂಧೆಗೆ ಖರೀದಿ ಅಧಿಕಾರಿಗಳು ಮುಂದಾಗಿರುವ ಬಗ್ಗೆ ಮಾಹಿತಿ ಬಂದಿದೆ. ಈ ಬಾರಿ ಇಂತಹ ಕೃತ್ಯಕ್ಕೆ ಅವಕಾಶ ಕೊಡಬಾರದೆಂದು ಎಚ್ಚರಿಕೆ ನೀಡಿದರು.

ತಹಶೀಲ್ದಾರ್ ಕೆ.ಸಿ.ಸೌಮ್ಯ ಅವರು ಮಾತನಾಡಿ, ಪಟ್ಟಣ ಮತ್ತು ರಾಮನಾಥಪುರದಲ್ಲಿ ರೈತರಿಗೆ ಅನುಕೂಲವಾಗುವ ಸಲುವಾಗಿ ಸರ್ಕಾರ ಎರಡು ಕಡೆ ರಾಗಿ, ಭತ್ತ ಖರೀದಿಗೆ ಅವಕಾಶ ಮಾಡಿಕೊಟ್ಟಿದೆ. ಅದರ ಬಳಕೆಯಾಗಬೇಕೆ ವಿನಃ ಅನಧಿಕೃತ ಕಾರ್ಯಕ್ಕೆ ಆಸ್ಪದ ಕೊಡಬಾರದು. ಈ ಬಾರಿ ರಾಗಿ ಖರೀದಿ ಒಟ್ಟು 45 ದಿನಗಳ ಕಾಲ ನಡೆಯಲಿದೆ. ಈ ತಿಂಗಳಲ್ಲಿ 14 ದಿನಗಳು ಹಾಗೂ ಮುಂದಿನ ತಿಂಗಳಲ್ಲಿ 31 ದಿನಗಳು ಖರೀದಿ ಪ್ರಕ್ರಿಯೆ ಇರಲಿದೆ.

ಕಳೆದ ಬಾರಿ ಎದುರಿಸಿದ ಶೌಚಾಲಯ ಸಮಸ್ಯೆ, ತೂಕದ ವ್ಯತ್ಯಾಸ ಹಾಗೂ ಮೂಲಭೂತ ಸೌಲಭ್ಯಗಳ ಕೊರತೆಯನ್ನು ಸರಿಪಡಿಸಲಾಗುತ್ತಿದೆಂದು ಅಧಿಕಾರಿಗಳು ಭರವಸೆ ನೀಡಿದ್ದಾರೆ. ಯುಗಾದಿ ಹಾಗೂ ಮಹಾಶಿವರಾತ್ರಿ ಹಬ್ಬಗಳ ನಡುವೆಯೂ ರೈತರು ಯಾವುದೇ ಒತ್ತಡಕ್ಕೆ ಒಳಗಾಗದೆ ನಿಗದಿತ ಅವಧಿಯೊಳಗೆ ರಾಗಿ ತಲುಪಿಸಲು ಸಹಕರಿಸಬೇಕೆಂದು ತಿಳಿಸಿದರು.

ರೈತಸಂಘದಅಧ್ಯಕ್ಷ ಭುವನೇಶ್ವರ್, ಮಾಜಿ ಅಧ್ಯಕ್ಷರಾದ ಯೋಗಣ್ಣ, ಹೊಂಬೇಗೌಡ, ಮಾಜಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ನಂಜುಂಡಸ್ವಾಮಿ, ಮಾಜಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷ ಯೋಗೇಶ್, ಚನ್ನಕೇಶವೇಗೌಡ, ಆಹಾರ ನಿರೀಕ್ಷಕ ಮಂಜುನಾಥ್, ರೈತ ಸಂಘದ ಮುಖಂಡರು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

## ನಾಪತ್ತೆ ಹೈಡ್ರಾಮಾ: ಪತಿಯೊಂದಿಗೆ ತೆರಳಲು ನಿರಾಕರಣೆ

» ಮೊದಲನೇ ಪುಟದಿಂದ

ಸಿಸಿಟಿವಿಯನ್ನು ಪರಿಶೀಲನೆ ನಡೆಸಿದ್ದ ಪ್ರಿಯಾಂಕಳನ್ನು ಪೊಲೀಸರು, ಫೆ.14ರ ರಾತ್ರಿ ಆಕೆಯ ಪ್ರಿಯಕರ ಪಶ್ಚಿಮಬಂಗಾಳ ಮೂಲದ ಡೇವಿಡ್ ಮನೆಯಲ್ಲಿ ಪತ್ತೆಹಚ್ಚಿದ್ದರು. ಬಳಿಕ ಹಾಸನದ ಡಿವೈಎಸ್‌ಪಿ ಗಂಗಾಧರಪ್ಪ ಅವರು ಇಬ್ಬರನ್ನು ಕಚೇರಿಗೆ ಕರೆತಂದು ವಿಚಾರಣೆ ನಡೆಸಿದ ವೇಳೆ ಇಬ್ಬರ ನಡುವೆ ಸಂಬಂಧ ಇರುವುದು ಬೆಳಕಿಗೆ ಬಂದಿದೆ.

ಕಳೆದ ನಾಲ್ಕೈದು ವರ್ಷಗಳಿಂದ ಕುಣಿಗಲ್ ಬಳಿಯ ಕೆಮಿಕಲ್ ಫ್ಯಾಕ್ಟರಿಯಲ್ಲಿ ಪ್ರಿಯಾಂಕ ಹಾಗು ಡೇವಿಡ್ ಕೆಲಸ ಮಾಡುತ್ತಿದ್ದರು. ಆನಂತರದಲ್ಲಿ ಇಬ್ಬರು ಸಂಬಂಧ ಹೊಂದಿದ್ದರು. ಈ ಬಗ್ಗೆ ಪತಿ ಹಾಗು ತಮ್ಮ ಕುಟುಂಬದವರಿಗೆ ಯಾವುದೇ ಅನುಮಾನ ಬಾರದ ರೀತಿ ನಡೆದುಕೊಂಡಿದ್ದಳು.

ಫೆ.12 ರಂದು ಸಂಜೆ 6.45ರ ಸಮಯದಲ್ಲಿ ತಾಯಿ ಜೊತೆ ಕೈಮರದ ಬಳಿ ಬಂದಿದ್ದ ಪ್ರಿಯಾಂಕ ಸಾರಿಗೆ ಬಸ್ ಹತ್ತಿದ್ದಳು. ನಂತರ ಬೇಲೂರು ಬಸ್ ನಿಲ್ದಾಣಕ್ಕೆ ಬಂದ ಪ್ರಿಯಾಂಕ 7:59 ರಲ್ಲಿ ತಾಯಿಗೆ ಕರೆ ಮಾಡಿ ಕುಣಿಗಲ್ ತೆರಳುವುದಾಗಿ ಹೇಳಿ, ನಂತರ 8:07 ನಿಮಿಷಕ್ಕೆ ಚಿಕ್ಕಮ್ಮ ಸೌಮ್ಯ ಅವರಿಗೆ ಕರೆ ಮಾಡಿ ಅದೇ ರೀತಿ ಹೇಳಿದ್ದಳು. 8:12 ಕ್ಕೆ ಪ್ರಿಯಾಂಕ ಮೊಬೈಲ್ ಸ್ವಿಚ್ ಆಫ್ ಆಗಿತು.

**ಬೇರೆ ರಾಜ್ಯಕ್ಕೆ ತೆರಳಲು ಪ್ಲ್ಯಾನ್**

ಪ್ರಿಯಾಂಕ ಗಂಡನನ್ನು ಬಿಟ್ಟು ಪ್ರಿಯಕರನ ಜೊತೆ ವಾಸ ಮಾಡಲು ನಿರ್ಧರಿಸಿ,ಅದಕ್ಕಾಗಿ ಮೊದಲೇ ಪ್ಲ್ಯಾನ್ ಮಾಡಿ ಫೆ.12 ರಂದು ಬೇಲೂರಿಗೆ ಬರುತ್ತಿದ್ದಂತೆ ಡೇವಿಡ್ ಬೈಕ್ ಹತ್ತಿ ಕಲ್ಕೆರೆ ಬಳಿ ಬಂದು ಬಟ್ಟೆಗಳನ್ನು ಎಸೆದು ಚಿನ್ನಾಭರಣಕ್ಕಾಗಿ ಕೊಲೆ ಮಾಡಿದ್ದಾರೆಂದು ಬಿಂಬಿಸಿದ್ದಳು. ಪ್ರಿಯಾಂಕ ಮತ್ತೊಂದು ಫೋನ್‌ನನ್ನು ಬಳಸುತ್ತಿದ್ದು ಈ ಯಾವುದೇ ವಿಚಾರ ಗಂಡನಿಗೆ, ಆಕೆಯ ಕುಟುಂಬಸ್ಥರರಿಗೆ ತಿಳಿದಿರಲಿಲ್ಲ. ಡೇವಿಡ್ ಪಶ್ಚಿಮ ಬಂಗಾಳ ಮೂಲದವನಾಗಿದ್ದು, ಕೆಲವೇ ತಿಂಗಳಲ್ಲಿ ಫ್ಯಾಕ್ಟರಿ ಮಧ್ಯ ಪ್ರದೇಶಕ್ಕೆ ಸ್ಥಳಾಂತರವಾಗುತ್ತಿತ್ತು. ಇಬ್ಬರು ಅಲ್ಲಿಗೆ ಹೋಗಿ ಬಾಳಲು ನಿರ್ಧರಿಸಿದ್ದರು. ಅದಕ್ಕಾಗಿ ಈ ರೀತಿಯ ನಾಟಕವಾಡಿರುವುದಾಗಿ ತನಿಖೆ ವೇಳೆ ಬಾಯ್ಬಿಟ್ಟಿದ್ದಾಳೆ.

# ಸಂತ ಸೇವಾಲಾಲ್ ಶ್ರೇಷ್ಠ ಪರಂಪರೆ ರಚಿಸಿದ್ದಾರೆ

• ಪ್ರಜೋದಯ ವರದಿ

**ಹಾಸನ:** ಪರಂಪರೆಯಲ್ಲಿ ಶಬ್ದಗಳು ಬದಲಾಗಬಹುದು, ಆದರೆ ಆಶ್ರಯ, ಸತ್ಯ ಎಂದಿಗೂ ಕೂಡ ಬದಲಾಗುವುದಿಲ್ಲ, ಅಂತಹ ಶ್ರೇಷ್ಠ ಪರಂಪರೆಯನ್ನು ಸಂತ ಸೇವಾಲಾಲ್ ಅವರು ರಚಿಸಿದ್ದಾರೆಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಚ್.ಎಲ್. ಮಲ್ಲೇಶಗೌಡ ಅವರು ತಿಳಿಸಿದ್ದಾರೆ.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಂತ ಸೇವಾಲಾಲ್ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜಕ್ಕೆ ಮಾದರಿಯಾಗುವಂತಹ ಚೌಕಟ್ಟಿನ ಒಳಗೆ ಸಂತ ಸೇವಾಲಾಲ್ ಅವರು ಬದುಕನ್ನು ನಡೆಸುತ್ತಾ ಜಗತ್ತಿಗೆ ಶ್ರೇಷ್ಠ ವ್ಯಕ್ತಿಯಾಗಿ ಕಂಡುಬಂದರು ಎಂದು ಹೇಳಿದರು.

ಸೇವಾಲಾಲ್ ಅವರ ಬಗ್ಗೆ ಲಿಖಿತವಾಗಿ ಯಾವುದೇ ಮಾಹಿತಿ ಇಲ್ಲದಿದ್ದರು ಮೌಖಿಕ ಪರಂಪರೆಯ ದೊಡ್ಡ ದಾಖಲೆ ಜಗತ್ತಿನಲ್ಲಿದೆ. ಸಂತ ಸೇವಾಲಾಲ್ ಅವರು ಸಮಾಜವನ್ನು ತಿದ್ದಲು ಸನ್ಯಾಸತ್ವವೇ ಸರಿಯೆಂದು



ವಿವಾಹವನ್ನು ತೊರೆದು ಸಮಾಜದ ಒಳಿತಿಗಾಗಿ ಸನ್ಯಾಸಿ ಪಟ್ಟವನ್ನು ಸ್ವೀಕರಿಸಿದರು ಎಂದರು.

ಕನ್ನಡ ನಾಡು ನೆಲವು ಜಗತ್ತಿನ ಅಚ್ಚರಿಗಳಲ್ಲಿ ಒಂದು, ನಮ್ಮ ವೃತ್ತಿಯೇ, ನಮ್ಮ ಧರ್ಮ ಆ ಶ್ರದ್ದೆಯೇ ಜಗತ್ತಿಗೆ ಕೊಡುಗೆ ಆಗಿರುತ್ತದೆ. ಜಗತ್ತಿನಲ್ಲಿ ಎಲ್ಲರೂ ಪ್ರಕೃತಿ ಆರಾಧಕರು ತದನಂತರ ಪ್ರತಿ ಕೃತಿ ಆರಾಧಕರು, ಪ್ರಕೃತಿಯಲ್ಲಿ ಕಾಣುವಂತಹ ಪ್ರತಿಯೊಂದು ದೈವದ ಸ್ವರೂಪ, ಪ್ರಕೃತಿಯೇ ಮನುಷ್ಯನ ಸೃಷ್ಟಿಯ ಮೂಲವಾಗಿರುತ್ತದೆ ಎಂದರು.

ಜನಪದ ಇತಿಹಾಸವು ಜಗತ್ತಿನಲ್ಲಿ ನೇರವಾದ ಇತಿಹಾಸ, ಜನಪದ ಹಾಡುಗಳ ಮೂಲಕ ಇರುವಂತಹ ಸತ್ಯಗಳನ್ನು ಜಗತ್ತಿಗೆ ಅರಿವು ಮೂಡಿಸುವ ಮೂಲಕ ಶರಣರ ಶ್ರೇಷ್ಠತೆಯನ್ನು ಕಾಣಬಹುದು ಎಂದರು.

ಜಿಲ್ಲಾ ಬಂಜಾರ ಸಂಘದ ಉಪಾಧ್ಯಕ್ಷ ಧರ್ಮಪ್ಪ ಅವರು ಮಾತನಾಡಿ, ಸಮಾಜದಲ್ಲಿ ಎಂದಿಗೂ ಕೂಡ ಮಾನವರ ನಡುವೆ ಜಾತಿ, ವರ್ಗಗಳ ಭೇದ ಇಲ್ಲದೆ ಎಲ್ಲರೂ ಒಂದೇ ಎಂಬ ಭಾವನೆ ನಮ್ಮಲ್ಲಿ ಇದರೆ ಮಾತ್ರ ಶರಣರ ಸಾಹಿತ್ಯವನ್ನು ಜೀವನದಲ್ಲಿ ಅಳವಡಿಸಿಕೊಳಲು ಸಾಧ್ಯ. ಬಂಜಾರ ಸಮಾಜದ ಆರಾಧ್ಯ ದೇವ ಸಂತ ಸೇವಾಲಾಲ್‌ರವರ ಆಧ್ಯಾತ್ಮಿಕ, ಧಾರ್ಮಿಕ, ಸಾಹಿತ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ತಿಳಿಸಿದರು.

ಪ್ರಕೃತಿಯನ್ನು ನಾವು ಉಳಿಸಿದರೆ ಪ್ರಕೃತಿ ನಮ್ಮನು ಉಳಿಸುತ್ತದೆ, ಪ್ರಕೃತಿಯ ಸೃಷ್ಟಿಯೇ ಮಾನವ ಆದ್ದರಿಂದ ಗಿಡ ಮರಗಳನ್ನು ಬೆಳೆಸುತ್ತಾ ಪ್ರಕೃತಿಯನ್ನು ಸಮೃದ್ಧಿಸಿದರೆ ಪ್ರಕೃತಿಯು ಎಲ್ಲರ ಜೀವ ರಕ್ಷಣೆ ಮಾಡುತ್ತದೆಂದು ಹೇಳಿದರು.

ಸಂತ ಸೇವಾಲಾಲ್ ಅನೇಕ ಪ್ರವಚನಗಳ ಮೂಲಕ ಮನುಷ್ಯ ತಾನು ಭೂಮಿಗೆ ಬಂದ ಕಾರಣ ತಿಳಿದುಕೊಂಡು, ನಿರ್ಮಲ ನಡೆನುಡಿಗಳನ್ನು ಅನುಸರಿಸಬೇಕು, ಮಾನವ ಬದುಕಿನ ಬಗ್ಗೆ ನಿತ್ಯಾ ಯೋಚಿಸಬೇಕು ಹಸಿವು, ಮೋಹ, ಮಾಮಕಾರವನ್ನು ತಿಳಿದುಕೊಳ್ಳಬೇಕೆಂದು ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಹೆಚ್.ಪಿ. ತಾರಾನಾಥ್, ಕನ್ನಡ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಬೊಮ್ಮೇಗೌಡ ಹಾಗೂ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

## ಗುಹೆಕಲ್ಲಮ್ಮ-ಚಿಕ್ಕಮ್ಮದೇವಿ ಅದ್ದೂರಿ ಕುಂಭ ಮಹೋತ್ಸವ



ಹಾಸನ: ಮಹಾಶಿವರಾತ್ರಿ ಅಂಗವಾಗಿ ನಗರ ಸಮೀಪದ ಶ್ರೀ ಗುಹೆಕಲ್ಲಮ್ಮ-ಶ್ರೀ ಚಿಕ್ಕಮ್ಮ ದೇವಿಯವರ 30ನೇ ವರ್ಷದ ಅದ್ದೂರಿ ಕುಂಭ ಮಹೋತ್ಸವವು ವಿಜೃಂಭಣೆಯಿಂದ ನೆರವೇರಿತು.

ಫೆ.15ರ ಭಾನುವಾರ ಬೆಳಿಗ್ಗೆ ತಣ್ಣೀರುಹಳ್ಳ ಹಳ್ಳದ ರಾಮೇಶ್ವರ ದೇವಸ್ಥಾನದಿಂದ 101 ಕಳಸ ಹಾಗೂ ಹೂವಿನ ಮಂಟಪದಲ್ಲಿ ಅಮ್ಮನವರ ಮೆರವಣಿಗೆ ಪ್ರಮುಖ ರಾಜ ಬೀದಿಗಳಲ್ಲಿ ಸಂಚರಿಸಿ ದೊಡ್ಡಮಂಡಿಗನಹಳ್ಳಿ ಗ್ರಾಮಕ್ಕೆ ಬಂದಿತು. ಮಧ್ಯಾಹ್ನ 12-30ಕ್ಕೆ ಅಮ್ಮನವರ ಮೂಲ ವಿಗ್ರಹಕ್ಕೆ ಕುಂಭಾಭಿಷೇಕ, ಮಹಾಮಂಗಳಾರತಿ ಹಾಗೂ ನೈವೈದ್ಯ ಪೂಜಾ ನಡೆದವು. ಭಕ್ತಾಧಿಗೆ ಅನ್ನದಾನ ಹಾಗು ರಾತ್ರಿ 7ರಂದು ಶ್ರೀ ಶಾರದ ಕಲಾತಂಡದವರಿಂದ ಗಾನ ಭಕ್ತಿ ಸುಧೆಯನ್ನು ಏರ್ಪಡಿಸಲಾಗಿತ್ತು. ಶಾಸಕ ಸ್ವರೂಪ ಪ್ರಕಾಶ್ ದೇವಾಲಯಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ದೊಡ್ಡಮಂಡಿಗನಹಳ್ಳಿ, ಚಿಕ್ಕಮಂಡಿಗನಹಳ್ಳಿ, ಗುಡ್ಡೇನಹಳ್ಳಿ, ಗುಡ್ಡೇನಹಳ್ಳಿ ಕೊಪ್ಪಲು, ದೇವರಾಯಪಟ್ಟಣ, ತಣ್ಣೀರುಹಳ್ಳ ಗ್ರಾಮಸ್ಥರು ಹಾಗು ಭಕ್ತಾಧಿಗಳು ಪಾಲ್ಗೊಂಡಿದ್ದರು.

## ಜಾತಿ ನಿಂದನೆ ಕಾಯ್ದೆ ದುರ್ಬಳಕೆ : ಕ್ರಮಕ್ಕೆ ವಕೀಲರ ಆಗ್ರಹ

» ಮೊದಲನೇ ಪುಟದಿಂದ

ದಾಖಲಿಸಲಾಗುವುದೆಂದು ಪುರಸಭೆ ಮುಖ್ಯಾಧಿಕಾರಿ ಹೇಳಿದ್ದಾರಂತೆ. ನಂತರ ಈ ಪ್ರಕರಣಕ್ಕೆ ಸಂಬಂಧಿಸಿ ಅಭಿಜ್ಞಾನ್ ವಿರುದ್ಧ ಅಟ್ರಾಸಿಟಿ ಕೇಸ್ ದಾಖಲಿಸಿರುವುದನ್ನು ಖಂಡಿಸಿ ವಕೀಲರು ಹೇಮಾವತಿ ಸೇತುವೆ ಬಳಿಯಿಂದ ಪುರಸಭೆ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಜಾತಿ ನಿಂದನೆ ಕಾಯ್ದೆಯನ್ನು ದುರ್ಬಳಕೆ ಮಾಡಿಕೊಂಡು ಸಾರ್ವಜನಿಕರಿಗೆ ವಿನಾಕಾರಣ ತೊಂದರೆ ನೀಡುತ್ತಿರುವ ಅಧಿಕಾರಿಗಳನ್ನು ತಕ್ಷಣ ಅಮಾನತುಪಡಿಸಿ ಇಲಾಖಾ ಕ್ರಮ ಕೈಗೊಳ್ಳಬೇಕು ಹಾಗೂ ನೊಂದವರಿಗೆ ನ್ಯಾಯ ಒದಗಿಸಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪುರಸಭೆ ಕಚೇರಿ ಬಳಿ ಜಮಾಯಿಸಿದ ವಕೀಲರು ಮನವಿ ಸಲ್ಲಿಸಲು ಗಂಟೆಗಟ್ಟಲೆ ಕಾಯ್ದರೂ ಮುಖ್ಯಾಧಿಕಾರಿ ಸ್ಥಳಕ್ಕೆ ಆಗಮಿಸದ ಕಾರಣ ಆಕ್ರೋಶಗೊಂಡ ವಕೀಲರು ಕಚೇರಿಗೆ ಬೀಗ ಹಾಕಲು ಮುಂದಾದರು. ಈ ವೇಳೆ ವಕೀಲರು ಹಾಗೂ ಪೊಲೀಸರ ನಡುವೆ ವಾಗ್ವಾದ ನಡೆಯಿತು.

ಪರಿಸ್ಥಿತಿ ಉದ್ವಿಗ್ನಗೊಂಡ ಹಿನ್ನಲೆಯಲ್ಲಿ ಸ್ಥಳಕ್ಕೆ ಆಗಮಿಸಿದ ಪ್ರಭಾರ ಉಪ ವಿಭಾಗಾಧಿಕಾರಿ ಮಂಜುನಾಥ್ ಅವರನ್ನು ಪ್ರತಿಭಟನಾಕಾರರು ಸುತ್ತುವರಿದು ತಮ್ಮ ಆಕ್ಷೇಪಗಳನ್ನು ತಿಳಿಸಿದರು. ಅಭಿಜ್ಞಾನ್ ವಿರುದ್ಧ ದಾಖಲಿಸಿರುವ ಅಟ್ರಾಸಿಟಿ ಕೇಸ್ ಅನ್ನು ಕೂಡಲೇ ವಾಪಸ್ ಪಡೆಯಬೇಕು ಹಾಗೂ ಖಾತೆ ಬದಲಾವಣೆ ಸಂಬಂಧ ನ್ಯಾಯಸಮ್ಮತ ವಾಗಿ ಕ್ರಮ ಕೈಗೊಳ್ಳಬೇಕೆಂದು ವಕೀಲರು ಮನವಿ ಸಲ್ಲಿಸಿದರು.

ಜಿಲ್ಲೆಯ ವಿವಿಧ ಭಾಗಗಳಿಂದ ವಕೀಲರು ನ್ಯಾಯಾಲಯದ ಕಾರ್ಯಕಲಾಪಗಳಿಂದ ಸಾಂಕೇತಿಕವಾಗಿ ಹೊರಗುಳಿದು ಪ್ರತಿಭಟನೆ ನಡೆಸಿದರು. ಹಳೆ ಬಸ್ ನಿಲ್ದಾಣದ ಮುಂಭಾಗ ಕೆಲಕಾಲ ಮಾನವ ಸರಪಳಿ ನಿರ್ಮಿಸಿ, ಮುಖ್ಯಾಧಿಕಾರಿ ಮಹೇಶ್ವರಪ್ಪ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಉಪವಿಭಾಗಾಧಿಕಾರಿಗಳ ಮೂಲಕ ಮಹೇಶ್ವರಪ್ಪ ಅವರನ್ನು ಅಮಾನತು ಮಾಡುವಂತೆ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ವಕೀಲರ ಸಂಘದ ಜಿಲ್ಲಾಧ್ಯಕ್ಷ ಕಾರ್ಲೆ ಮೊಗಣ್ಣಗೌಡ, ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ಯಶ್ವಂತ್, ಜಿಲ್ಲಾ ಕಾರ್ಯದರ್ಶಿ ಒಂಬೆಶ್, ರಘು, ಆಲೂರು ಮಹೇಂದ್ರ, ಆರ್.ಬಿ.ಸುರೇಶ್, ಹೊಳೆನರಸೀಪುರ ತಾಲ್ಲೂಕು ವಕೀಲರ ಸಂಘದ ಮಾಜಿ ಅಧ್ಯಕ್ಷ ನಟರಾಜ್, ತಾಲ್ಲೂಕು ವಕೀಲರ ಸಂಘದ ಮಾಜಿ ಅಧ್ಯಕ್ಷ ಪ್ರದೀಪ್, ಕಾರ್ಯದರ್ಶಿ ವಾಣಿ, ಉಪಾಧ್ಯಕ್ಷ ಮಹೇಶ್, ಹರೀಶ್ ಭಾಗವಹಿಸಿದ್ದರು.

## ಯಶ್ ತಾಯಿ ನಿವೇಶನ ವಿವಾದ: ಏಕಪಕ್ಷೀಯ ತೀರ್ಪಿಗೆ ತಡೆ

• ಪ್ರಜೋದಯ ವರದಿ

**ಹಾಸನ:** ಚಲನಚಿತ್ರನಟ ಯಶ್ ಅವರ ತಾಯಿ ಪುಷ್ಪಾ ಖರೀದಿಸಿದ್ದ ನಿವೇಶನ ಮಾಲೀಕತ್ವದ ವಿವಾದಕ್ಕೆ ಸಂಬಂಧಿಸಿದಂತೆ ಹಾಸನದ ನಾಲ್ಕನೇ ಜೆಎಂಎಫ್‌ಸಿ ನ್ಯಾಯಾಲಯ ನೀಡಿದ್ದ ಏಕ ಪಕ್ಷೀಯ ತೀರ್ಪಿಗೆ ತಾತ್ಕಾಲಿಕ ತಡೆ ಸಿಕ್ಕಿದೆ.

ನಿವೇಶನ ಮಾಲೀಕತ್ವವನ್ನು ಲಕ್ಷ್ಮಮ್ಮ ಅವರ ಪರವಾಗಿ ಜಿಪಿಎ ಹೋಲ್ಡರ್ ದೇವರಾಜು ಹೊಂದಿದ್ದಾರೆಂದು ಹೇಳಲಾಗುತ್ತಿದೆ. ಅವರು ದಾಖಲಿಸಿದ್ದ ಓಎಸ್ ನಂ. 672/2023 ಪ್ರಕರಣದಲ್ಲಿ 2025ರ ಏ.16 ರಂದು ನೀಡಲಾಗಿದ್ದ ಆದೇಶದ ಅನುಷ್ಠಾನಕ್ಕೆ ನ್ಯಾಯಾಲಯ ತಡೆ ನೀಡಿದೆ. ತಮ್ಮನ್ನು ಕಕ್ಷಿದಾರರಾಗಿ ಪರಿಗಣಿಸದೇ ಏಕಪಕ್ಷೀಯ ಆದೇಶ ನೀಡಲಾಗಿದೆ ಹಾಗು ಕೋರ್ಟ್ ಆದೇಶ ಬಂದ ನಂತರ 90 ದಿನಗಳೊಳಗೆ ಮೇಲ್ಮನವಿ ಸಲ್ಲಿಸದ ಬಗ್ಗೆಯೂ ಪುಷ್ಪಾ ಮಧ್ಯಂತರ ಅರ್ಜಿ ಸಲ್ಲಿಸಿದ್ದರು. ನ್ಯಾಯಾಲಯವು ಆ ವಿಳಂಬ ಅರ್ಜಿಯನ್ನು ಮಾನ್ಯಗೊಳಿಸಿ. ಪ್ರಕರಣದಲ್ಲಿ ಕಕ್ಷಿದಾರರಾಗಿ ಹಾಜರಾಗಲು ಅವಕಾಶ ನೀಡಿದೆ. ಪ್ರಸ್ತುತ ದಾಖಲಾಗಿರುವ ದಾವೆ ಇತ್ಯರ್ಥವಾಗುವವರೆಗೆ ಓಎಸ್ ನಂ.672/2023ರ ಆದೇಶ ಅನುಷ್ಠಾನಕ್ಕೆ ಸಂಪೂರ್ಣ ತಡೆ ನೀಡಲಾಗಿದೆ. ವಿವಾದಿತ ಷೆಡ್ಯೂಲ್ ಸ್ವತ್ತನ್ನು ಪರಭಾರೆ ಮಾಡು ವುದು ಅಥವಾ ಮೂಲ ಸ್ವರೂಪ ಬದಲಾವಣೆ ಮಾಡುವುದನ್ನು ಅರ್ಜಿದಾರರಿಗೆ ನಿರ್ಬಂಧಿಸಲಾಗಿದೆ. ಫೆ.18ಕ್ಕೆ ವಿಚಾರಣೆಯನ್ನು ಮುಂದೂಡಲಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಯಶ್ ತಾಯಿ ಪುಷ್ಪಾ, ನಿವೇಶನ ವಿಚಾರವಾಗಿ ಕೆಲ ದಿನಗಳಿಂದ ಗಲಾಟೆ ಆರಂಭವಾಗಿದ್ದು, ಜಾಗ ತಮ್ಮದೋ ಅಥವಾ ದೇವರಾಜು ಅವರದ್ದೋ ಎಂಬುದನ್ನು ಪರಿಶೀಲನೆ ನಡೆಸಿ ನ್ಯಾಯಾಲಯ ತಡೆಯಾಜ್ಞೆ ನೀಡಿ, ನಮಗೂ ವಾದಿಸಲು ಅವಕಾಶ ನೀಡಿದೆ. ಮುಂದಿನ ದಿನಗಳಲ್ಲಿ ಜಾಗ ಯಾರಿಗೆ ಸೇರಿದ್ದು ಎಂಬುದು ಸ್ಪಷ್ಟವಾಗುತ್ತದೆ. ಅವರು ಹೇಳುತ್ತಿ ರುವುದು ಬೇರೆ ಜಾಗ. ನಮ್ಮ ಹೆಸರು, ವಿಳಾಸ ನೀಡಿರುವುದರಿಂದಲೇ ಕೋರ್ಟ್ ತಡೆಯಾಜ್ಞೆ ನೀಡಿದೆ. ನಮಗೆ ಮೊದಲಿನಿಂದಲೂ ಇದು ನಮ್ಮದೇ ಜಾಗ ಎಂಬ ಖಾತ್ರಿ ಇತ್ತು ಎಂದು ಹೇಳಿದರು.

# ವೈಭವದ ಅಮೃತೇಶ್ವರಸ್ವಾಮಿ ಮಹಾ ರಥೋತ್ಸವ

ಅರಕಲಗೂಡು: ಪಟ್ಟಣದ ಕೋಟೆ ಪುರಾಣ ಪ್ರಸಿದ್ದ ಅಮೃತೇಶ್ವರಸ್ವಾಮಿ ಮಹಾ ರಥೋತ್ಸವವು ಸೋಮವಾರ ಭಕ್ತರ ಸಮ್ಮುಖದಲ್ಲಿ ವೈಭವದಿಂದ ನೆರವೇರಿತು.

ಬೆಳಿಗ್ಗೆ ದೇವಾಲಯದಲ್ಲಿ ಮೂಲ ವಿಗ್ರಹಕ್ಕೆ ಅಭಿಷೇಕ, ಪೂಜಾ ಕಾರ್ಯಗಳು ನೆರವೇರಿದವು. ಬಳಿಕ ಉತ್ಸವ ಮೂರ್ತಿಗಳನ್ನು ಅಲಂಕರಿಸಿ ಕೃಷ್ಣಗಂಧೋತ್ಸವ ನಡೆಸಲಾಯಿತು. ಉತ್ಸವದಲ್ಲಿ ಬಂದ ಮೂರ್ತಿಗಳನ್ನು ಅಲಂಕರಿಸಿದ ರಥದಲ್ಲಿ ಪ್ರತಿಷ್ಠಾಪಿಸಿ ಪೂಜಾವಿಧಿಗಳನ್ನು ನಡೆಸಲಾಯಿತು.

ಅರೇಮಾದನಹಳ್ಳಿ ವಿಶ್ವಕರ್ಮ ಮೂಲ ಮಠದ ಶಿವಸುಜ್ಞಾನ ತೀರ್ಥ ಸ್ವಾಮೀಜಿ, ತಹಶೀಲ್ದಾರ್ ಕೆ.ಸಿ. ಸೌಮ್ಯ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು. ನೆರೆದಿದ್ದ ಭಕ್ತರು ಶಿವನಾಮ ಸ್ಮರಣೆ ಮಾಡುತ್ತಾ ರಥ ಬೀದಿಯಲ್ಲಿ ತೇರನ್ನು ಎಳೆದು ಸಂಭ್ರಮಿಸಿದರು. ನಾದಸ್ವರ, ತಮಟೆ ವಾದ್ಯಗಳು ರಥೋತ್ಸವಕ್ಕೆ ಮೆರಗು ನೀಡಿತು. ತಮಟೆ ವಾದ್ಯದ ಲಯಕ್ಕೆ ಯುವಕರು, ಚಿಣ್ಣರು, ಮಹಿಳೆಯರು ಹೆಜ್ಜೆಹಾಕಿದರು. ತೇರನ್ನು ಎಳೆಯು



ತ್ತಿದ್ದ ಭಕ್ತರಿಗೆ ಬಿಸಿಲಿನ ದಗೆ ನೀಗಿಸಲು ಮನೆ, ಮನೆಗಳಲ್ಲಿ ಮಜ್ಜಿಗೆ, ಪಾನಕ, ಮುಂತಾದ ತಂಪು ಪಾನಿಯಗಳನ್ನು ವಿತರಿಸಲಾಯಿತು. ರಥ ಸ್ವಸ್ಥಾನ ಸೇರಿದ ಬಳಿಕ ಪ್ರಸಾದ ವಿನಿಯೋಗ ನಡೆಸಲಾಯಿತು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಸಿ.ಡಿ. ನಾಗೇಂದ್ರಕುಮಾರ್, ಕಂದಾಯ ನಿರೀಕ್ಷಕ ಕೆ.ಸಿ.ಲೋಕೇಶ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಪುಟ್ಟರಾಜ್, ಮುಖಂಡರಾದ ಮುತ್ತಿಗೆ ರಾಜೇಗೌಡ, ವಿ.ಎ. ನಂಜುಂಡ ಸ್ವಾಮಿ, ನರಸೇಗೌಡ, ವೆಂಕಟೇಶ್, ರಮೇಶ್ ವಾಟಾಳ್, ನಿತ್ಯಜ್ಯೋತಿ ನಾಗರಾಜ್, ಎ.ಎಸ್.ಹಿರಣ್ಣಯ್ಯ, ಎ.ಎನ್.ಗಣೇಶಮೂರ್ತಿ, ಬ್ರಾಹ್ಮಣ ಮಹಾ ಸಭಾ ಅಧ್ಯಕ್ಷ ನರಸಿಂಹ ಮೂರ್ತಿ, ಕಾರ್ಯದರ್ಶಿ ರಮೇಶ್ ಉಪಸ್ಥಿತರಿದ್ದರು. ರಾತ್ರಿ ಶಾಂತೋತ್ಸವ ನಡೆಯಿತು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK